

ಕೊಪ್ಪಳ ಜಿಲ್ಲೆಯ
ಜನಪದ ಬೈಗುಳ

ಬದುಕಿನಲ್ಲಿ ಬೈಗುಳ ಹೊಸದೇನಲ್ಲ. ಸಾಮಾನ್ಯವಾಗಿ ಇವು ಜನಪದರ ನಡುವಿನಿಂದ ಸಿಡಿದೆದ್ದ ಪದಗಳು. ಅವು ಯಾವ ಭೂಪ್ರದೇಶಗಳನ್ನೂ ಕೂಡ ಬಿಟ್ಟಿಲ್ಲ. ಈ ಬೈಗುಳಗಳ ಮೇಲೆ ಅಲ್ಲಲ್ಲಿ ಸಂಶೋಧನೆಗಳು, ಚರ್ಚೆ, ವಿಚಾರ ಸಂಕಿರಣಗಳು ಅಷ್ಟೇ ಅಲ್ಲಾ ಬೈಗುಳ ಹಬ್ಬಗಳೂ ಕೂಡಾ ನಡೆದಿವೆ. ಈ ಕುರಿತು ನಾಡಿನ ಸಂಶೋಧನಾ ವಲಯ ಕೆಲಸ ಮಾಡಿದೆ.

ಎಂ ಎಂ ಕಲಬುರ್ಗಿ, ಎಂ. ಚಿದಾನಂದಮೂರ್ತಿ, ಮೃತ್ಯುಂಜಯ ಹೊರಕೇರಿ, ಪಿ.ಕೆ. ಕೃಷ್ಣಭಟ್ಟ, ಬಸವರಾಜ ನೆಲ್ಲಿಸರ, ಸಿ.ಪಿ.ನಾಗರಾಜು ಹೀಗೆ ಅನೇಕ ಲೇಖಕರು ಬೈಗುಳಗಳನ್ನು ಸಂಗ್ರಹಿಸಿದ್ದು, ಅವುಗಳ ಕುರಿತು ವಿಶ್ಲೇಷಿಸಿ ಬರೆದಿದ್ದು ನಮ್ಮ ಮುಂದಿವೆ. ಈಗ ಆ ಸಾಲಿಗೆ ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್‌ರವರ 'ಕೊಪ್ಪಳ ಜಿಲ್ಲೆಯ ಜನಪದ ಬೈಗುಳ' ಕೃತಿ ಸೇರುತ್ತದೆ. ಅಲ್ಲದೇ ನಮ್ಮ ಕೊಪ್ಪಳ ಜಿಲ್ಲೆಯಲ್ಲಿಯೇ ಈ ವಿಷಯ ಕುರಿತು ಅಧ್ಯಯನ ಮಾಡಿದವರಲ್ಲಿ ಮೊದಲಿಗರಾಗಿ ಡಾ.ಸಿದ್ಧಲಿಂಗಪ್ಪ ಕೊಟ್ನೆಕಲ್ ನಿಲ್ಲುತ್ತಾರೆ.

ಕೊಪ್ಪಳ ಜಿಲ್ಲೆಯ ಸಾಹಿತ್ಯ ಲೋಕದಲ್ಲಿ ಗುರುತಿಸಿಕೊಂಡು ಬರೆಯುವ ಲೇಖಕರಲ್ಲಿ ಡಾ.ಸಿದ್ದಲಿಂಗಪ್ಪ ಕೊಟ್ನೆಕಲ್‌ರವರು ವಿಭಿನ್ನ ಆಲೋಚನೆಯ ವ್ಯಕ್ತಿತ್ವದವರು. ಸಾಹಿತ್ಯ ಲೋಕದ ಇವರ ಸೇವೆಯಲ್ಲಿ ಈ ವಿಭಿನ್ನ ಕೃತಿ ಮೈಲುಗಲ್ಲಾಗಿ ನಿಲ್ಲುತ್ತದೆ. ಸಾಹಿತ್ಯ, ಚರಿತ್ರೆ, ಸಂಶೋಧನೆ, ಜಾನಪದ, ಪೌರಾಣಿಕ ಹೀಗೆ ವಿವಿಧ ಸಾಹಿತ್ಯ ಪ್ರಕಾರಗಳನ್ನು ರಚಿಸುತ್ತಾ, ಬಗೆ-ಬಗೆಯಾಗಿ ಯೋಚಿಸುತ್ತಾ, ಬರೆಯುತ್ತಾ ಓದುಗ ಲೋಕವನ್ನು ಹಾಗೂ ಮುಖ್ಯವಾಗಿ ವಿದ್ಯಾರ್ಥಿ ಬಳಗವನ್ನು ಸಾಹಿತ್ಯ ಮತ್ತು ಸಂಸ್ಕೃತಿಯ ಅಧ್ಯಯನದೆಡೆಗೆ ಕರೆದೊಯ್ಯುತ್ತಿದ್ದಾರೆ. ಈಗ ನಮ್ಮ ಪರಂಪರೆ ಒಳಗಿನ ಬಹುಮುಖ್ಯವಾಗಿರುವ ಜನಪದ ಬೈಗುಳಗಳ ಕುರಿತು ಬರೆದಿರುವ ಈ ಕೃತಿಯು ನಶಿಸಿ ಹೋಗುತ್ತಿರುವ ಜಾನಪದದ ಭಾಷಿಕ ಸಂರಚನೆಯನ್ನು ಮತ್ತೆ ನೆನಪಿಸುತ್ತಿದೆ. ಕ್ರಿಯಾಶೀಲ ಚಟುವಟಿಕೆಯಲ್ಲಿ ತೊಡಗಿಸಿಕೊಂಡು, ಕೊಪ್ಪಳ ಜಿಲ್ಲೆಯಲ್ಲಿ ಗುರುತಿಸಿಕೊಂಡಿರುವ ಡಾ.ಸಿದ್ದಲಿಂಗಪ್ಪ ಕೊಟ್ನೆಕಲ್ ಅವರ ಸಾಹಿತ್ಯ ಸೇವೆ ಜನ ಮೆಚ್ಚುವಂತಾಗಲಿ. ಅವರ ಲೇಖನಿಯಿಂದ ಇನ್ನಷ್ಟು ಕೃತಿಗಳು ಹೊರಬರಲಿ ಎಂಬುದು ನನ್ನ ಸದಾಶಯವಾಗಿದೆ.

■ **ರಮೇಶ ಗಬ್ಬೂರ್**
ಸಾಹಿತಿಗಳು ಹಾಗೂ ಸದಸ್ಯರು,
ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ
ಬೆಂಗಳೂರ

ಮೇಘನಾ ಪ್ರಕಾಶನ
'ಕನಸು' ನಿಲಯ
ಮಹಾಂತಯ್ಯನಮಠ ಶಾಲೆ ಎದುರಿಗೆ,
ಬಿ.ಟಿ.ಪಾಟೀಲ್ ನಗರ, ಕೊಪ್ಪಳ-೫೮೩೨೩೧

ಕೊಪ್ಪಳ ಜಿಲ್ಲೆಯ ಜನಪದ ಬೈಗುಳ ■ ಸಂ: ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್


ಕೊಪ್ಪಳ ಜಿಲ್ಲೆಯ ಜನಪದ ಬೈಗುಳ

ಸಂಪಾದಕರು

■ ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್



ಕೊಪ್ಪಳ ಜಿಲ್ಲೆಯ
ಜನಪದ ಬೈಗುಳ



ಕೊಪ್ಪಳ ಜಿಲ್ಲೆಯ ಜನಪದ ಬೈಗುಳ

ಸಂಪಾದಕರು :

ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್
ಎಂ.ಎ., ಎಂ.ಫಿಲ್., ಪಿಎಚ್.ಡಿ.

ಮೇಘನಾ ಪ್ರಕಾಶನ,
'ಕನಸು' ನಿಲಯ, ಮಹಾಂತಯ್ಯನಮಠ ಶಾಲೆ ಎದುರಿಗೆ,
ಬಿ.ಟಿ. ಪಾಟೀಲ್ ನಗರ, ಕೊಪ್ಪಳ-೫೮೩ ೨೩೧.

ಕೊಪ್ಪಳ ಜಿಲ್ಲೆಯ ಜನಪದ ಬೈಗುಳ

ಸಂಪಾದಕರು : **ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್,**
ಹಿರಿಯಶ್ರೇಣಿ ಕನ್ನಡ ಉಪನ್ಯಾಸಕರು
ಶ್ರೀ ಗವಿಸಿದ್ಧೇಶ್ವರ ಪದವಿ ಪೂರ್ವ
ಮಹಾವಿದ್ಯಾಲಯ, ಕೊಪ್ಪಳ-೫೮೩ ೨೩೧.
ಮೊ.: ೯೪೪೮೫೭೦೩೪೦,
E-mail : skotnekal@gmail.com

ಪ್ರಕಾಶಕರು : **ಶ್ರೀಮತಿ ಮಂಜುಳಾ ಎಸ್. ಕೊಟ್ನೆಕಲ್,**
'ಕನಸು' ನಿಲಯ ಮಹಾಂತಯ್ಯನಮಠ ಶಾಲೆ
ಎದುರಿಗೆ, ಬಿ. ಟಿ. ಪಾಟೀಲ ನಗರ,
ಕೊಪ್ಪಳ-೫೮೩ ೨೩೧.

ಪ್ರಥಮ ಮುದ್ರಣ : ೨೦೨೪

ಪ್ರತಿಗಳು : ೧೦೦೦

ಪುಟಗಳು : ೧೦೪

ದರ : ೧೫೦/-

ಬಳಸಿದ ಕಾಗದ : ೭೦ ಜಿ.ಎಸ್.ಎಂ. ಎನ್.ಎಸ್. ಮ್ಯಾಪಲಿಥೋ

ಅಳತೆ : ಡೆಮ್ಮಿ ೧/೮

ISBN No. : ೯೭೮-೯೩-೩೪೦-೯೧೪೧-೦

ಮುದ್ರಣ : ಐಶ್ವರ್ಯ ಪ್ರಿಂಟಿಂಗ್ ಪ್ರೆಸ್,
ಡಾ. ಬಿ. ಆರ್. ಅಂಬೇಡ್ಕರ್ ಸರ್ಕಲ್, ಕೊಪ್ಪಳ
ಮೊ. ೮೧೪೭೩೪೮೪೪೦, ೯೪೪೮೩೦೦೦೭೦

ಚಿರಸ್ಮರಣೆ



ಜನಪದ ಸಾಹಿತಿ ಹಾಗೂ ಉಪನ್ಯಾಸಕ

ದಿ॥ ಡಾ. ಹನುಮಂತಪ್ಪ ಅಂಡಗಿ

ಚಿಲವಾಡಗಿ-ಕೊಪ್ಪಳ

ನೆನಕೆಗಳು

ಕೊಪ್ಪಳ ಜಿಲ್ಲೆಯಲ್ಲಿ ಬಳಸುತ್ತಿರುವ
ಬೈಗುಳಗಳನ್ನು ಸಂಗ್ರಹಿಸುವಲ್ಲಿ ಸಹಕರಿಸಿದ
ನಮ್ಮ ಶ್ರೀ ಗವಿಸಿದ್ಧೇಶ್ವರ ಪದವಿ
ಮಹಾವಿದ್ಯಾಲಯ ಹಾಗೂ ಪದವಿ ಪೂರ್ವ
ಕಾಲೇಜಿನ ಸಕಲ ವಿದ್ಯಾರ್ಥಿಗಳ ನೆನಕೆಗಳು

ಮುನ್ನುಡಿ......

'ಭಾಷೆ' ಎನ್ನುವುದು ಮಾನವನು ತನ್ನ ಭಾವನೆಗಳನ್ನು ಅಭಿವ್ಯಕ್ತಿಸಲು ಕಂಡುಕೊಂಡ ಮಾಧ್ಯಮ. ಭಾಷೆಯನ್ನು ಸಾಮಾಜಿಕ ಸಂಬಂಧಗಳ ಹಿನ್ನೆಲೆಯಲ್ಲಿ ಗಮನಿಸಿದಾಗ ಕೇವಲ ಅಭಿವ್ಯಕ್ತಿ ಮತ್ತು ಸಂವಹನದ ಮಾಧ್ಯಮವಾಗಿ ಕಾರ್ಯನಿರ್ವಹಿಸದೇ; ಭಾಷಾಭಿನ್ನತೆ, ಪ್ರಾದೇಶಿಕತೆ, ಲಿಂಗತಾರತಮ್ಯ, ವರ್ಗಾಧಾರಿತ, ಜಾತಿಯಾಧಾರಿತ, ಶ್ರಮಾಧಾರಿತವಾಗಿ ಈ ಮೊದಲಾದ ಸಂಗತಿಗಳನ್ನು ಗರ್ಭೀಕರಿಸಿಕೊಂಡಿರುತ್ತದೆ. ಈ ಹಿನ್ನೆಲೆಯಲ್ಲಿ ಭಾಷಿಕ ಅಧ್ಯಯನವೆಂದರೆ ಅದು ಕೇವಲ ಅಕ್ಷರ ರಚನೆಯ ಅಥವಾ ಪದಗಳ ರಚನೆಯ ಅಧ್ಯಯನವಾಗಿರುವುದಿಲ್ಲ. ಅದೊಂದು ಸಾಮಾಜಿಕವಾದ, ಸಾಂಸ್ಕೃತಿಕವಾದ ಅಧ್ಯಯನವೇ ಆಗಿರುತ್ತದೆ. ಭಾಷೆಯನ್ನು ಬಳಸುವಾಗ ಶೈಕ್ಷಣಿಕವಾಗಿ, ಪ್ರಾದೇಶಿಕವಾಗಿ, ಲಿಂಗಾಧಾರಿತವಾಗಿ ವ್ಯತ್ಯಾಸಗಳು ಇರುವುದನ್ನು ಕಾಣಬಹುದಾಗಿದೆ. ಸ್ತ್ರೀ ಮತ್ತು ಪುರುಷರು ಬಳಸುವ ಭಾಷೆಯಲ್ಲಿ ವ್ಯತ್ಯಾಸಗಳು ಕಾಣಬಂದರೂ ಸಹ ಭಾಷೆಗೆ ಈ ಬೇಧಗಳು ಇರುವುದಿಲ್ಲ. ಆದರೆ ಅಧ್ಯಯನದ ಅನುಕೂಲಕ್ಕಾಗಿಯೋ, ಸಾಮಾಜಿಕ ಆಯಾಮಗಳನ್ನು ಸೂಕ್ಷ್ಮವಾಗಿ ಗುರುತಿಸುವುದಕ್ಕಾಗಿಯೋ ನಾವು ಭಾಷೆಯಲ್ಲಿ ಸ್ತ್ರೀ ಭಾಷೆ ಮತ್ತು ಪುರುಷ ಭಾಷೆ ಎಂದು ವರ್ಗೀಕರಣ ಮಾಡಿಕೊಂಡಿರುತ್ತೇವೆ. ಈ ಬಗೆಯ ವರ್ಗೀಕರಣವೂ ಏಕಪಕ್ಷೀಯವಾಗಿದ್ದು, ಕೆಲವೊಮ್ಮೆ ಅಸಮಂಜಸವೂ ಎನಿಸಬಹುದು. ಹಾಗಾಗಿ ಈ ಬಗೆಯ ವರ್ಗೀಕರಣದ ಹಿಂದಿರುವ ಪುರುಷ ಮನೋಧರ್ಮದ ರಾಜಕಾರಣವನ್ನು ಬೈಗುಳಗಳ ಹಿನ್ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ನಂತರ ಭಾಷಿಕ ರಚನೆ ಬಳಕೆಗೊಳ್ಳುವ ಸಂದರ್ಭದಲ್ಲಿ ಪುರುಷ ಪ್ರಧಾನ ವ್ಯವಸ್ಥೆಯ ಮೌಲ್ಯಗಳು ಕೆಲಸ ಮಾಡಿರುತ್ತವೆ ಎನ್ನುವುದು ಖಚಿತ. ಈ ಭಾಷೆ ಸಾಮಾಜಿಕ ಸಂಬಂಧಗಳ ಸಂದರ್ಭದಲ್ಲಿ ಬೈಗುಳಗಳನ್ನು ನೋಡುವಾಗ ಯಾವ ಹಿನ್ನೆಲೆಯಲ್ಲಿ ಮೈದಾಳುತ್ತವೆ? ಯಾಕಾಗಿ ಮೈದಾಳುತ್ತವೆ? ಅದರ ಹಿಂದಿನ ಉದ್ದೇಶವೇನು ಎಂದು ಆಲೋಚಿಸಿದಾಗ ಕೆಲವೊಂದು ಅಮೂರ್ತ ಭಾವನೆಗಳನ್ನು ಮೂರ್ತರೂಪದಲ್ಲಿ ಹೊರಹಾಕಲಿಕ್ಕೆ ಭಾಷೆಯನ್ನು ಬಳಸಲಾಗುತ್ತದೆ ಎಂದು ಹೇಳಬಹುದು.

ಜನಪದರಾಡುವ ಭಾಷೆ ಹಲವು ವೈವಿಧ್ಯತೆಗಳಿಂದ ಕೂಡಿದೆ. ದಿನನಿತ್ಯದ ಬದುಕಿನಲ್ಲಿ ಜನರು ತಮ್ಮದೇ ಆದ ಭಾಷೆಯನ್ನು ವಿಭಿನ್ನ ರೀತಿಯಲ್ಲಿ ಬಳಸುತ್ತಾರೆ. ಅವರು ಬಳಸುವ ಭಾಷೆಯಲ್ಲಿ ಜೀವನಾನುಭವದ ಎಲ್ಲಾ ಆಯಾಮಗಳನ್ನು ಒಳಗೊಂಡಿರುತ್ತದೆ. ತಿಳಿಹಾಸ್ಯ, ಗಾದೆ, ನುಡಿಗಟ್ಟು, ಒಗಟು, ಒಡಪು, ತ್ರಿಪದಿಗಳು,

ಕಥನ ಕವನಗಳು, ಕಥೆಗಳು ಮುಂತಾಗಿ ಹೆಸರಿಸಬಹುದು. ಮುಖ್ಯವಾಗಿ ಬೈಗುಳಗಳಿಗಂತೂ ಜನಪದರಲ್ಲಿ ಬರವಿಲ್ಲ. ಅಂತಹ ಬೈಗುಳಗಳನ್ನು ಸಂಗ್ರಹ ರೂಪದಲ್ಲಿ ಹಿಡಿದಿಡುವ ಪ್ರಯತ್ನವನ್ನು ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್ ಅವರು ಈ ಕೃತಿಯಲ್ಲಿ ಮಾಡಿದ್ದಾರೆ. ಜನಪದರ ಭಾಷೆ ಸ್ವಲ್ಪ ಸ್ವಲ್ಪವೇ ಮರೆಯಾಗುತ್ತಿರುವ ಇಂತಹ ಹೊತ್ತಿನಲ್ಲಿ ಈ ರೀತಿಯ ಸಂಗ್ರಹಗಳು ಓದುಗರಿಗೆ ಮತ್ತು ಭಾಷೆಯನ್ನು ಅಧ್ಯಯನ ಮಾಡುವವರಿಗೆ ಈ ಸಂಗ್ರಹ ಕೃತಿ ಆಕರವಾಗಿ ನಿಲ್ಲಬಹುದು. ಜನಪದ ಭಾಷೆ ಎಂದರೆ ಮೂಗು ಮುರಿಯುವ ಈ ಹೊತ್ತಲ್ಲಿ, ಆ ಭಾಷೆಯ ಸೌಭಾಗ್ಯವನ್ನು, ಮನೋರಂಜನೆಯನ್ನು ಉಣಬಡಿಸುವ ಅಂಶಗಳು ಇದರಲ್ಲಿ ಕಾಣಬಹುದು.

ಜನಪದರ ಭಾಷೆ ನಶಿಸಿ ಹೋಗುತ್ತಿರುವ ಈ ಸಂದರ್ಭದಲ್ಲಿ ಬೈಗುಳಗಳನ್ನು ಸಂಗ್ರಹಿಸಿ ಓದುಗರಿಗೆ, ಅಧ್ಯಯನಕಾರರಿಗೆ ಒದಗಿಸಿಕೊಡುವುದು ತೀರಾ ಅವಶ್ಯವಾಗಿದೆ. ಕನ್ನಡ ಭಾಷಾ ಉಪನ್ಯಾಸಕರಾದ ಡಾ.ಸಿದ್ಧಲಿಂಗಪ್ಪ ಕೊಟ್ನೆಕಲ್ ಅವರು ಬೈಗುಳಗಳನ್ನು ಸೂಕ್ಷ್ಮವಾಗಿ ಗಮನಿಸಿದ್ದಾರೆ. ಜನಪದ ಸಾಹಿತ್ಯ ಬೋಧಿಸುವ ಅವರಿಗೆ ಅದರ ಚರಿತ್ರೆ, ಹುಟ್ಟು–ಬೆಳವಣಿಗೆಯ ಜೊತೆಗೆ ಅದರ ಮಹತ್ವದ ಅರಿವಿದೆ. ಈ ಕೃತಿಯಲ್ಲಿ ದಾಖಲಾಗದ ಹಾಗೂ ಮರೆಯಾಗುತ್ತಿರುವ ಬೈಗುಳಗಳ ಬಗ್ಗೆ ಆಸ್ಥೆವಹಿಸಿರುವುದು ಜನಪದ ಭಾಷೆಯ ಬಗ್ಗೆ ಅವರಿಗಿರುವ ಕಳಕಳಿ ಎದ್ದುಕಾಣವಂಥದ್ದು. ಕೊಪ್ಪಳ ಜಿಲ್ಲೆಗೆ ಸೀಮಿತಗೊಳಿಸಿ 'ಕೊಪ್ಪಳ ಜಿಲ್ಲೆಯ ಜನಪದ ಬೈಗುಳ' ಎನ್ನುವ ಈ ಕೃತಿ ಜಿಲ್ಲೆಯಲ್ಲಿ ಬಳಕೆಯಲ್ಲಿದ್ದ ಜನಪದ ಬೈಗುಳಗಳನ್ನು ಸಂಗ್ರಹಿಸಿ ಓದುಗರ ಮುಂದಿರಿಸಿದ್ದಾರೆ.

ಜನಪದರಲ್ಲಿ ಬೈಗುಳಗಳಿಗೆ ವಿಶೇಷ ಸ್ಥಾನ–ಮಾನ ಇದೆ. 'ಬೈಗುಳ' ಎಂದರೆ ಕೆಟ್ಟದ್ದನ್ನು ನುಡಿಯುವುದು ಎಂದಲ್ಲ. ನಮ್ಮ ಹಿರಿಯರು ಕೆಟ್ಟದ್ದನ್ನು ಮಾತನಾಡಬಾರದು ಎಂದು ಹೇಳಿದ್ದರೂ, ಅದಕ್ಕೆ ವಿರೋಧವಾಗಿ ಬೈಗುಳಗಳನ್ನು ಮುಂದುವರಿಸುವುದನ್ನು ಈ ಸಾಲಿಗೆ ಸೇರಿಸಬಹುದಾಗಿದೆ. ಬೈಗುಳವನ್ನೇಕೆ ಬಯ್ಯಬೇಕು ಎಂಬ ಪ್ರಶ್ನೆ ಉದ್ಭವಿಸುವುದು ಸಹಜ. "ಕೈಲಾಗದವನು ಮೈಯಲ್ಲಾ ಪರಚಿಕೊಂಡ" ಎಂಬ ಮಾತು ನಮ್ಮಲ್ಲಿ ಪ್ರಚಲಿತದಲ್ಲಿದೆ. ಅಂದರೆ ಎದುರಾಳಿಗಳನ್ನು ದೈಹಿಕವಾಗಿ ಎದುರಿಸಲು ಅಸಮರ್ಥರಾದವರು ಬೈಗುಳ ಎಂಬ ಮಹಾ ಅಸ್ತ್ರದಿಂದ ಅವರನ್ನು ಸಮರ್ಥವಾಗಿ ಎದುರಿಸಲು ಸಿದ್ಧರಾಗುತ್ತಾರೆ. ಈ ರೀತಿಯ ಕೆಟ್ಟ ಮಾತುಗಳನ್ನು ಮಾತನಾಡುವವರ ಜೊತೆ ವಾದಕ್ಕಿಳಿಯದೇ ಅವರಿಂದ ದೂರವಿರುವುದೇ ಲೇಸೆಂದು ಸುಮ್ಮನಿರುವವರ ಸಂಖ್ಯೆ ಹೆಚ್ಚಾದಂತೆಲ್ಲಾ ಬೈಗುಳವನ್ನಾಡುವ ಜನರೂ ಕಡಿಮೆಯಾಗುತ್ತಾರೆ.

ಬಯ್ಯಲು ನಮ್ಮಲ್ಲಿ ತರಹೇವಾರಿ ಬೈಗುಳಗಳಿವೆ. ಈ ಸಂಗ್ರಹದಲ್ಲಿರುವ ಕೆಲವನ್ನು ಉದಾಹರಿಸುವುದಾದರೆ; ದಡ್ಡ, ಹುಚ್ಚ, ಹೆಡ್ಡ, ಮಬ್ಬ, ಮಂಕ, ಬುದ್ಧಿಗೇಡಿ, ತಲೆಹಿಡುಕ, ಮತಿಹೀನ, ಬೇವರ್ಸಿ, ದುರ್ಗಿ, ಇಧಿ, ತಾಟಗಿತ್ತಿ, ಅಯೋಗ್ಯ, ಕಬರಗೇಡಿ, ದಡ್ಡಮುಂಡೆ, ಲಜ್ಜೆಬಿಟ್ಟಾವ, ಹುಚ್ಚಗೆಂಡಿ, ಆಕಾರಗೇಡಿ, ಕಚ್ಚೆರುಕ, ಕುಂಟ್ಲಗಿತ್ತಿ, ತಿರುಬೋಕಿ, ದರಿದ್ರಗೇಡಿ, ದಾರಿತಪ್ಪಿದವಳು ಎಂಬಿತ್ಯಾದಿ ಬೈಗುಳಗಳು ಬುದ್ಧಿ ಮತ್ತು ಜ್ಞಾನ ಕಡಿಮೆ ಇರುವವರನ್ನು ಬಯ್ಯುವಂತಹವುಗಳಾಗಿವೆ. ಇಂತಹ ಬೈಗುಳಗಳು ಯಾವುದೇ ತೊಂದರೆಯನ್ನು ಈಡು ಮಾಡುವುದಿಲ್ಲ. ಬೈಸಿಕೊಂಡವರಿಗೆ ಕಷ್ಟವನ್ನುಂಟು ಮಾಡುವುದಿಲ್ಲ. ಒಂದೊಂದು ಸಲ ಒಳ್ಳೆಯ ಕೆಲಸವನ್ನು ಮಾಡಿದವರಿಗೂ ಈ ರೀತಿಯಿಂದ ಬಯ್ಯುವುದೂ ನಮ್ಮ ಭಾಗದಲ್ಲಿ ಉಂಟು. ಇವೆಲ್ಲಾ ತೀರಾ ಸಾಮಾನ್ಯ ಬೈಗುಳಗಳಾಗಿವೆ.

ಬೈಗುಳದ ಪರಮಾವಧಿ ಕೆಲವೊಮ್ಮೆ ಪ್ರಾಣಿಗಳಿಗೆ ಹೋಲಿಸಿ ಬಯ್ಯಲಾಗುತ್ತದೆ. ಮಂಗ್ಯಾ, ಕೋತಿ, ಹಂದಿ, ಕತ್ತೆ, ಎಮ್ಮಿ ಮಣಕ, ಕೋಣ ಎನ್ನುವ ಕೆಲವು ಪ್ರಾಣಿಗಳಿಗೆ ತಳುಕು ಹಾಕಲಾಗುತ್ತದೆ. ಮಂಗ್ಯಾ, ಕೋತಿ ಎಂಬ ಮಾತಿನಿಂದ ಬೈದಾಗ ಮನಸ್ಸಿಗೆ ನೋವೆನಿಸುವುದಿಲ್ಲ. ಬಹುಶಃ ಅದಕ್ಕೆ ಮಂಗನಿಂದ ಮಾನವನೆಂಬ ಕಾರಣವೂ ಇರಬಹುದು. ಆ ಒಂದಷ್ಟು ಪ್ರೀತಿಯೋ, ಅನುಕಂಪವೋ ಒಟ್ಟಿನಲ್ಲಿ ಅದು ಮನಸ್ಸಿಗೆ ನಾಟುವುದಿಲ್ಲ. ಆದರೆ ಕತ್ತೆ, ಹಂದಿ, ಎಮ್ಮೆ, ಸೀಳುನಾಯಿ ಎಂದೆಲ್ಲಾ ಬೈದಾಗ ಜನರ ನಡುವೆ ಅವಮಾನವಾಗುತ್ತದೆ. ಪಶುಗಳಿಗಿಂತ ಕಡಿಮೆಯಾದೆವೆಲ್ಲಾ ಎಂಬ ಸಣ್ಣ ಭಾವನೆ ಬರುವುದುಂಟು.

ಬಯ್ಯುವ ಬೈಗುಳ ಒಂದೊಂದು ಸಲ ಎಷ್ಟು ವಿಚಿತ್ರವಾಗಿರುತ್ತದೆ ಎಂದರೆ ಬಯ್ಯುವ ಪರಾಕಾಷ್ಠತೆಯಲ್ಲಿ ಹಿಂದು ಮುಂದು ಯೋಚಿಸದೇ ಯಾರ ಬದಲು ಇನ್ಯಾರನ್ನೋ ಬಯ್ಯುತಿರುತ್ತೇವೆ. ಸೂಳೇಮಗ ಎಂಬ ಒಂದುಪದ ಉತ್ತರ ಕರ್ನಾಟಕದಲ್ಲಿ ಹೆಚ್ಚು ಪ್ರಚಲಿತದಲ್ಲಿರುವ ಮತ್ತು ಸಾಮಾನ್ಯವಾಗಿ ಎಲ್ಲಾ ಸಂದರ್ಭಗಳಲ್ಲಿ ಉಪಯೋಗಿಸಬಹುದಾದ ಬೈಗುಳ. ಇದು ಒಳ್ಳೆಯ ಕೆಲಸ ಮಾಡಿದಾಗ ಮತ್ತು ಸಾಧನೆಯನ್ನು ಕಂಡಾಗ ಕೂಡಾ ಪ್ರೀತಿಯಿಂದ ಬೈಯುವ ಬೈಗುಳ. ಇಲ್ಲಿ ಬಯ್ಯಬೇಕಾಗಿರುವ ವ್ಯಕ್ತಿಯನ್ನು ಬಿಟ್ಟು ಅವರವ್ವನನ್ನು ಪರೋಕ್ಷವಾಗಿ ಬೈಯಲಾಗುತ್ತದೆ. ಹಾಗೆಯೇ ಹಾದರಗಿತ್ತಿಮಗ ತುಡುಗು, ಸೂಳೆಮಗನೆಂದು ಬಯ್ಯುವ ಬೈಗುಳದಲ್ಲಿ ಬೇರೆಯವರೇ ಬಯ್ಯಿಸಿಕೊಳ್ಳುತ್ತಾರೆ ."ನೀ ನನ್ನ ತಡವಿದರೆ ನಾ ನಿನಗ ಬಾಯಿಗೆ ಬಂದಂಗ, ಹಲ್ಕಟ್ಟು ಬೈದು ಬಿಡುತೀನಿ ನೋಡು" ಎಂಬ ಈ ಮಾತು ಉತ್ತರ ಕರ್ನಾಟಕದ ಕಡೆ ಹೆಚ್ಚು ಪ್ರಚಲಿತದಲ್ಲಿದೆ.

ದಕ್ಷಿಣ ಕರ್ನಾಟಕದ ಜನಕ್ಕೆ ಇಂತಹ ಮಾತುಗಳ ಅರ್ಥವಾಗುತ್ತದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ಇಲ್ಲಿ ಪುಂಖಾನು ಪುಂಖವಾಗಿ ಯಾವುದೇ ಎಗ್ಗಿಲ್ಲದೇ ಬಂದು ಹೋಗುತ್ತಲೇ ಇರುತ್ತದೆ. ಇಬ್ಬರು ವ್ಯಕ್ತಿಗಳ ನಡುವೆ ಯಾವುದೋ ಒಂದು ವಿಷಯ ತಾರಕಕ್ಕೇರಿ ವಾದಕ್ಕಿಳಿದಾಗ ಮೇಲಿನ ವಾಕ್ಯ ಬರುತ್ತದೆ.

ಇನ್ನು ಕುಡುಕರು, ತಲೆ ಹಿಡುಕರು, ಬುದ್ಧಿ ಭ್ರಮಣೆಯಾದವರು, ಅಜ್ಞಾನಿಗಳು, ಅವಿವೇಕಿಗಳು ಮುಂತಾದ ಬಯ್ಯುವ ಮಾತುಗಳಂತೂ ಕೇಳಲೇಬಾರದು. ನಾಗರಿಕ ಸಮಾಜದಲ್ಲಿ ತೀರಾ ಅನಾಗರಿಕ ಶಬ್ದ ಎಂದೆನಿಸಿಕೊಳ್ಳುವ ಮಾತುಗಳನ್ನಾಡಿ ಅಲ್ಲಿರುವ ಇತರರನ್ನು ಕೂಡಾ ಮುಜುಗರಕ್ಕೆ ಒಳಪಡಿಸುವವರೂ ಇದ್ದಾರೆ. "ಬಯ್ದು ಹೇಳೋರು ಬುದ್ಧಿ ಹೇಳ್ತಾರೆ" ಅನ್ನೋದು ನಮ್ಮಲ್ಲಿನ ವಾಡಿಕೆ. ಚಿಕ್ಕಮಕ್ಕಳಲ್ಲಿ ತಂದೆ ತಾಯಿಗಳ, ಶಾಲೆಯಲ್ಲಿ ಶಿಕ್ಷಕರ, ಸುತ್ತ ಮುತ್ತಲಿನ ಹಿರಿಯರ ಬೈಗುಳದ ಹೆದರಿಕೆ ಸದಾ ನಮ್ಮನ್ನು ಜಾಗೃತವಾಗಿರುವಂತೆ ಮಾಡುತ್ತದೆ. ಇಂತಹ ಬೈಗುಳದ ಹೆದರಿಕೆ ಇದ್ದಲ್ಲಿ ಅವರು ಯಾವಾಗಲೂ ಒಳ್ಳೆಯ ದಾರಿಯಲ್ಲಿ ನಡೆಯುವಂತೆ ಎಚ್ಚರವಹಿಸುತ್ತಾರೆ. ಕೆಲವರ ಮಾತೇ ಏಟಿಗಿಂತಲೂ ತೀಕ್ಷ್ಣವಾಗಿರುತ್ತದೆ. "ಜಾಣನಿಗೆ ಮಾತಿನ ಪೆಟ್ಟು" ಎಂಬ ಮಾತು ಹೆಚ್ಚು ಸಮಂಜಸವೆನ್ನಿಸುತ್ತದೆ.

ಬೈಗುಳ ಎಂಬುದಕ್ಕೆ ಪರ್ಯಾಯವಾದ ಮತ್ತು ಶ್ರೀಮಂತವಾದ ಪದವೆಂದರೆ ವಾಗ್ದಂಡನೆ. ಮಾತಿನಿಂದಲೇ ದಂಡಿಸುವುದು ಎಂದು ಇದರ ಅರ್ಥ. ಕಟುವಾದ ಪದಗಳನ್ನು ಬಳಸಿದಾಗ ಕೆಲವರಿಗೆ ನೋವಾಗುವುದುಂಟು. ಆದರೆ ಅದರ ಹಿಂದಿನ ತರ್ಕವನ್ನು ಯಾರೂ ಅರಿಯುವುದಿಲ್ಲ. ಇದು ವೈರುಧ್ಯ. "ಮಾತಿನಿಂ ನಡೆ ನುಡಿಯು॥ ಮಾತಿನಿಂ ಹಗೆ ಕೊಲೆಯು॥ ಮಾತಿನಿಂ ಸರ್ವ ಸಂಪದವು ಮಾತೇ ಮಾಣಿಕ್ಯ ಸರ್ವಜ್ಞ" ಎಂದು ಸರ್ವಜ್ಞ ಕವಿ ಹೇಳಿದ್ದಾನೆ. ಜಗತ್ತಿನ ಒಳಗೆ ಇರುವ ಒಳಿತು ಕೆಡುಕೆಲ್ಲವೂ ನಮ್ಮ ಮಾತಿನಿಂದಲೇ ಅವಲಂಬಿತವಾಗಿರುತ್ತದೆ ಎಂಬುದು ನಮಗೆ ಗೊತ್ತಿದೆ. ಹಾಗಾಗಿ ಯಾರಿಗಾದರೂ ನಾವು ಏನನ್ನಾದರೂ ಹೇಳಬೇಕಾಗಿದ್ದಲ್ಲಿ ಅದು ನೇರವಾಗಿರಬೇಕು ಮತ್ತು ಭಾವನೆಗಳಿಗೆ ನೋವಾಗುವಂತಹದ್ದು ಆಗಿರಬಾರದು ಎಂಬುದು ಮೂಲಭೂತವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕು.

ಪ್ರಪಂಚದಲ್ಲಿ ಬಯ್ಗುಳ ಹೊಸದೇನಲ್ಲಾ. ಬಹು ಭಾಷೆಯ ಭಾರತದಲ್ಲಂತೂ ಬಯ್ಗುಳಗಳ ಬಹುದೊಡ್ಡ ಭಂಡಾರವೇ ಇದೆ. ಬಯ್ಗುಳ ಒಂದು ಜನಪದ ಕೂಡ ಹೌದು. ಸುಸಂಸ್ಕೃತರೆನಿಸಿಕೊಂಡವರಿಂದಾಗಿ ಜನಪದ ಬೈಗುಳ

ಪದಗಳು ಇಂದು ಬಹಳಷ್ಟು ಮರೆಯಾಗಿರುತ್ತಿರುವುದು ವಿಷಾದನೀಯವೇ ಸರಿ.

ಬೈಗುಳ ಕೂಡ ಒಂದು ಗಾದೆ ಮಾತಿನಂತೆ ಇರುವುದನ್ನು ಗಮನಿಸಿ ಅದರ ಅರ್ಥವನ್ನು ಗ್ರಹಿಸಬೇಕಿದೆ. ಯಾವ ಬೈಗುಳವನ್ನು ಯಾವ ಸಂದರ್ಭದಲ್ಲಿ ಯಾರು ಬಳಸುತ್ತಾರೆ ಎಂಬುದು ಮುಖ್ಯವಾಗುತ್ತದೆ. ಈ ಸಂಗ್ರಹದಲ್ಲಿ ಕೆಲವು ವಿಭಾಗಗಳನ್ನು ಮಾಡಿಕೊಂಡಿರುವುದು ಈ ಕೃತಿಯ ವಿಶೇಷವಾಗಿದೆ. ಅದರಲ್ಲಿರುವ ವಿಭಾಗಗಳನ್ನು ಗಮನಿಸುವುದಾದರೆ; ಪುರಾಣ ವ್ಯಕ್ತಿಯ ಮೇಲಿನ ಬೈಗುಳ, ಅಜ್ಞಾನದ ಕುರಿತ ಬೈಗುಳ, ಮನುಷ್ಯನ ಸ್ವಭಾವದ ಮೇಲಿನ ಬೈಗುಳ, ಮನುಷ್ಯನ ಸಾವು ಕುರಿತ ಬೈಗುಳ, ಮನುಷ್ಯನ ಅವಯವಗಳ ಮೇಲಿನ ಬೈಗುಳ, ವಂಶಾವಳಿ ಕುರಿತ ಬೈಗುಳ, ಮಹಿಳೆಯರ ಕುರಿತ ಬೈಗುಳ, ಸ್ವ-ನಿಂದನೆಯ ಬೈಗುಳ, ಪ್ರಾಣಿ ಮತ್ತು ಪಕ್ಷಿಗಳ ಹೆಸರಿನಲ್ಲಿ ಬೈಗುಳ, ಅಲಂಕಾರಗಳ ಮೇಲಿನ ಬೈಗುಳ, ರೋಗಗಳ ಮೇಲಿನ ಬೈಗುಳ, ದುಷ್ಟತನದ ಬೈಗುಳ, ಗರ್ವದ ಬೈಗುಳ, ಶಾಪದ ಬೈಗುಳ, ಅಶ್ಲೀಲ ಬೈಗುಳ, ಬಣ್ಣಗಳ ಹೆಸರಿನ ಬೈಗುಳ, ಅನ್ಯದೇಶಿಪದ ಬಳಸಿ ಬೈಗುಳ ಇತ್ಯಾದಿ ಪ್ರಮುಖ ವಿಭಾಗಗಳನ್ನು ಕಾಣಬಹುದು. ಇವೆಲ್ಲವನ್ನೂ ಗಮನಿಸಿದಾಗ ಅವುಗಳ ಸ್ವರೂಪ ನೇರವಾಗಿ ತಿಳಿಯುತ್ತದೆ. ಮತ್ತು ಇದೊಂದು 'ನುಡಿಗೆಲಸ-ಸ್ಪೀಚ್ ಆ್ಯಕ್ಟ್' ಎಂದು ಕರೆಯಬಹುದಾಗಿದೆ.

ಆರೋಪದ, ಶಾಪರೂಪದ ಮತ್ತು ಕಾಮದ ನಂಟಿನ ಬಯ್ಗುಳಗಳ ಬಳಕೆ, ಅದರ ಬಗೆಗಳು ಮತ್ತು ಸಂದರ್ಭ, ಗಾದೆ ಮಾತಿನಂತಿರುವ ಆ ಜನಪದ ಭಾಷೆಗಳ ಅರ್ಥವನ್ನು ಲೇಖಕರು ವಿವರಿಸುವ ಪ್ರಯತ್ನ ಮಾಡಿದ್ದಾರೆ. ಕೊಪ್ಪಳ ಜಿಲ್ಲೆಗೆ ಸೀಮಿತ ಮಾಡಿಕೊಂಡು ಇಲ್ಲಿನ ಬೈಗುಳಗಳನ್ನು ಸಂಗ್ರಹ ಮಾಡಿಕೊಟ್ಟಿದ್ದಾರೆ. ಆದರೆ ನಾವ್ಯಾಕೆ ಬಯ್ಯುತ್ತೇವೆ? ಬಯ್ಯುವಿಕೆ ಹಾಗೂ ಮೆದುಳಿನ ನರಮಂಡಲ, ಮಾನಸಿಕ ಬೆಳವಣಿಗೆ, ಸಮಾಜದ ರಚನೆ ಮತ್ತು ಸಂಸ್ಕೃತಿ ಆಚರಣೆಗಳು, ಗಂಡಸು ಮತ್ತು ಹೆಂಗಸು ಬಯ್ಯುವಿಕೆಯಲ್ಲಿ ದೇಹದ ಚಹರೆಗಳು, ಬೈಗುಳದ ಬಗೆಗಿನ ಸಾಮಾಜಿಕ ನಿಲುವು ಮತ್ತು ನಂಬಿಕೆ ಇತ್ಯಾದಿಗಳನ್ನು ಆಳವಾಗಿ ಗಮನಿಸಿದ ಡಾ.ಸಿದ್ಧಲಿಂಗಪ್ಪ ಕೊಟ್ನೆಕಲ್ ಅವರು ಈ ಸಂಗ್ರಹದಲ್ಲಿ ದಾಖಲಿಸಿದ್ದಾರೆ.

ಡಾ.ಸಿದ್ಧಲಿಂಗಪ್ಪ ಕೊಟ್ನೆಕಲ್ ಅವರು ಈ 'ನುಡಿಗೆಲಸ' ಸಂಗ್ರಹವನ್ನು ಅದೆಷ್ಟು ಗಂಭೀರವಾಗಿ ಪರಿಗಣಿಸಿದ್ದಾರೆ ಎಂದು ಹೇಳುವುದಾದರೆ, ನುಡಿಗೆಲಸದ ಸಂದರ್ಭದಲ್ಲಿ ಅವರುಗಳ ಮುಖಚರ್ಯೆ, ಆಂಗಿಕ ಕ್ರಿಯೆ ಇತ್ಯಾದಿಗಳನ್ನು ಆಳವಾಗಿ ಗಮನಿಸಿ ಇಲ್ಲಿ ನೀಡುವ ಪ್ರಯತ್ನ ಮಾಡಿದ್ದಾರೆ. ಇದೊಂದು ಅಪರೂಪದ ಕೆಲಸ ಎನ್ನಬಹುದು.

ಬೈಗುಳ ಎಂಬ ಜನಪದವನ್ನು ಜನರ ನಡುವಿನಿಂದಲೇ ಹೆಕ್ಕಿರುವ ಡಾ.ಕೊಟ್ನೆಕಲ್ ಆ ಪದಗಳ ಒಳಗಿರುವ ಸೊಗಡು, ಬಳಸುವ ಸಮಯ, ಬುದ್ಧಿವಂತಿಕೆ, ಶಿಕ್ಷಣದ ಹಾಗೂ ಜ್ಞಾನ(ನೆನಪಿನ ಶಕ್ತಿ) ಇತ್ಯಾದಿಗಳನ್ನು ಈ ಜನಪದ ಶಬ್ದಗಳ ಮೂಲಕ ತಿಳಿಹೇಳುವ ಪ್ರಯತ್ನವನ್ನು ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಅವರ ಈ ಸಂಗ್ರಹದಲ್ಲಿ ಕಾಣಬರುವ ಪ್ರಮುಖ ಅಂಶಗಳೆಂದರೆ; ಮನದಲ್ಲಿ ಮೂಡುವ ಹತಾಶೆ, ಕೋಪ, ಸಂಕಟ, ನೋವು, ಅಸೂಯೆ, ಹೊಟ್ಟೆಕಿಚ್ಚಿನ ಭಾವನೆಗಳನ್ನು ಹೊರಹಾಕುವುದಕ್ಕಾಗಿ ಬಯ್ಯುತ್ತೇವೆ. ಇತರರ ವರ್ತನೆಗಳಿಗನುಗುಣವಾಗಿ ನಮ್ಮ ಇಚ್ಛೆಗೆ ತಕ್ಕಂತೆ ಹತೋಟಿಯಲ್ಲಿಡುವುದಕ್ಕಾಗಿ ಬಯ್ಯುತ್ತೇವೆ, ಇತರರಿಂದ ಅಡಚಣೆ ಇಲ್ಲವೇ ಹಾನಿಯುಂಟಾಗದಂತೆ ತಡೆಯುವುದಕ್ಕಾಗಿ ಬಯ್ಯುತ್ತೇವೆ, ಇತರರ ಜೊತೆ ಹೊಂದಿರುವ ಒಲವು–ನಲಿವನ್ನು ತೋರಿಸುವುದಕ್ಕಾಗಿ ಬಯ್ಯುತ್ತೇವೆ, ಇತರರ ಆಕ್ರಮಣ ಇಲ್ಲವೇ ಹಲ್ಲೆಯಿಂದ ಪಾರಾಗುವುದಕ್ಕಾಗಿ ಬಯ್ಯುತ್ತೇವೆ, ಎದುರಾಳಿಯನ್ನು ಕೀಳಾಗಿ ಕಾಣುವುದು ಇಲ್ಲವೇ ಅಪಮಾನಗೊಳಿಸುವುದಕ್ಕಾಗಿ ಬಯ್ಯುತ್ತೇವೆ, ಕಣ್ಣ ಮುಂದಿನ ಸಮಾಜದಲ್ಲಿ ನಡೆಯುತ್ತಿರುವ ಆಚರಣೆಗಳನ್ನು ಮತ್ತು ಜನ ಸಮುದಾಯದ ನಡೆನುಡಿಗಳನ್ನು ಒರೆಹಚ್ಚಿ ನೋಡುವಾಗ ಬಯ್ಯುತ್ತೇವೆ. ನಮ್ಮ ನಡೆ ನುಡಿಯಲ್ಲಿನ ತಪ್ಪುಗಳಿಂದಾಗಿ ಕಷ್ಟ ನಷ್ಟಗಳಿಗೆ ಒಳಗಾದಾಗ ನಮ್ಮನ್ನು ನಾವೇ ಬಯ್ದುಕೊಳ್ಳುತ್ತೇವೆ. ಇತರರ ನಡೆ ನುಡಿಯಲ್ಲಿನ ತಪ್ಪುಗಳನ್ನು ತಿದ್ದಿ ಸರಿಪಡಿಸುವುದಕ್ಕಾಗಿ ಬಯ್ಯುತ್ತೇವೆ. ಒಟ್ಟಿನಲ್ಲಿ ಬೇಕೆಂಬುದನ್ನು ಪಡೆದುಕೊಳ್ಳುವ ಮಗುವಿನ ಕೂಗು, ಆಕ್ರೋಶದ ಪದಗಳ ಬಯ್ಗುಳ ಅಸಂಸ್ಕೃತವಲ್ಲ. ಅದು ಒಂದು ಜನಪದ ಎಂಬುದನ್ನು ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್‌ರ ಇವರು ಗಟ್ಟಿಯಾಗಿಯೇ ದಾಖಲಿಸಿದ್ದಾರೆ.

ಕನ್ನಡದಲ್ಲಿ ಇದುವರೆಗೂ ಬೈಗುಳಗಳ ಕುರಿತು ಬಂದಿರುವ ಕೃತಿಗಳೆಂದರೆ ಡಾ. ಸಿ.ಪಿ. ನಾಗರಾಜರ ಕನ್ನಡ ಬಯ್ಗುಳ ಓದು, ಮೃತ್ಯುಂಜಯ ಹೊರಕೇರಿಯವರ ಉತ್ತರ ಕರ್ನಾಟಕದ ಬಯ್ಗುಳಗಳು, ಎಂ. ಎಂ. ಕಲಬುರ್ಗಿಯವರ ಸಮಗಾರ ದೇವರಿಗೆ ಮಚ್ಚಿಪೆಟ್ಟು, ಪಿ. ಕೆ. ಕೃಷ್ಣಭಟ್ಟರ ಬೈಗುಳ–ಒಂದು ಅಧ್ಯಯನ, ಹರಿಕೃಷ್ಣಭಟ್ಟರ ದಕ್ಷಿಣ ಕನ್ನಡ ಹವ್ಯಕರ ಬೈಗುಳಗಳು, ಕಾವ್ಯಜೀವಿಯವರ ಜನಪದ ಬೈಗುಳ–ಒಂದು ಅಧ್ಯಯನ, ಬಸವರಾಜ ನೆಲ್ಲಿಸರ ಇವರ ಗ್ರಾಮ ಜೀವನದಲ್ಲಿ ಬಯ್ಗುಳ, ಎಂ. ಚಿದಾನಂದಮೂರ್ತಿಯವರ ಶಬ್ದಕೋಶ ಪ್ರಪಂಚದ ಅಗ್ನಿಕುಂಡ ಬೈಗುಳಗಳು, ಮೃತ್ಯುಂಜಯ ಹೊರಕೇರಿಯವರ ಬೈಗುಳ–

ಜನಪದಸಾಹಿತ್ಯದ ಒಂದು ಪ್ರಕಾರ, ತಪಸ್ವಿಕುಮಾರರ ಗ್ರಾಮ್ಯ ಬಯ್ಗುಳಬನಿ ಇತ್ಯಾದಿ ಕೆಲವು ಬಯ್ಗುಳಗಳಿಗೆ ಸಂಬಂಧಿಸಿದಂತೆ ಕೆಲವಾರು ಬರಹ, ಸಂಗ್ರಹ, ಲೇಖನಗಳು ಪ್ರಕಟಗೊಂಡಿದ್ದರೂ, ಸಿ. ಪಿ. ನಾಗರಾಜರು ಬಯ್ಗುಳದ ಬಗ್ಗೆಯೇ ಪಿಹೆಚ್.ಡಿ ಅಧ್ಯಯನ ಮಾಡಿರುವುದರಿಂದ ಕನ್ನಡ ಬಯ್ಗುಳ ಓದು ಪುಸ್ತಕ ಹೆಚ್ಚಿನ ಪ್ರಾಮುಖ್ಯತೆ ಪಡೆದುಕೊಂಡರೆ, ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್ ಅವರ 'ಕೊಪ್ಪಳ ಜಿಲ್ಲೆಯ ಜನಪದ ಬೈಗುಳ' ಸಂಗ್ರಹ ಕೃತಿ ಅಧ್ಯಯನಕಾರರಿಗೆ ಒಂದು ಯೋಗ್ಯ ಸಂಗ್ರಹ ಕೃತಿಯಾಗಿ ನಿಲ್ಲುತ್ತದೆ ಎನ್ನುವುದು ನನ್ನ ಭಾವನೆ.

ಡಾ. ಹಂದ್ರಾಳ ಗವಿಸಿದ್ದಪ್ಪ
ಕನ್ನಡ ಸಂಪನ್ಮೂಲ ವ್ಯಕ್ತಿಗಳು
ಅಜೀಮ್ ಪ್ರೇಮ್‌ಜಿ ಫೌಂಡೇಷನ್
ಜಿಲ್ಲಾ ಸಂಸ್ಥೆ, ಕೊಪ್ಪಳ

ಪ್ರಸ್ತಾವನೆ.....

ಕನ್ನಡ ಭಾಷೆಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಅದರ ಚರಿತ್ರೆ ಅಧ್ಯಯನ ಮಾಡಿದಂತೆಲ್ಲಾ ಮತ್ತಷ್ಟು ವಿಭಿನ್ನ ಆಯಾಮಗಳು ಪರಿಚಯವಾಗುತ್ತವೆ. ಪ್ರಾಚೀನ ಕಾಲದಲ್ಲಿ ತ್ರಿಪದಿ, ಚೌಪದಿ, ಷಟ್ಪದಿ, ಕಂದ, ರಗಳೆ, ಸುಳಾದಿ, ಉಗಾಭೋಗ ಹೀಗೆ ವಿವಿಧ ಛಂದ ಪ್ರಕಾರಗಳಲ್ಲಿ ಕನ್ನಡ ಸಾಹಿತ್ಯವನ್ನು ರಚಿಸಲಾಯಿತು. ಗದ್ಯ-ಪದ್ಯಗಳ ಮಿಶ್ರಣವಾದ ಚಂಪೂ ಕಾವ್ಯದ ರಚನೆಯಿಂದ ಕನ್ನಡ ಸಾಹಿತ್ಯ ಇನ್ನಷ್ಟು ಶ್ರೀಮಂತಗೊಂಡಿತು. ಸುಮಾರು ೫-೬ನೇ ಶತಮಾನದಿಂದಲೂ ಕನ್ನಡ ಸಾಹಿತ್ಯದ ಕುರುಹುಗಳು ದೊರಕಿದರೂ ಅದು ಆ ಕಾಲಕ್ಕಷ್ಟೇ ಸೀಮಿತವಾಗಿರಬಹುದು. ಮುಂದಿನ ೧೦-೧೧ನೇ ಶತಮಾನದಲ್ಲಿ ಪಂಪ, ರನ್ನರಾದಿಯಾಗಿ ಆಗಮ ಕವಿಗಳು ಕನ್ನಡ ಸಾಹಿತ್ಯವನ್ನು ಉತ್ತುಂಗಕ್ಕೇರಿಸಿದರು.

ನಂತರ ಬಂದ ೧೨ನೇ ಶತಮಾನದ ಶರಣರು ತಮ್ಮ ವಚನಗಳ ಮೂಲಕ ಇಡೀ ವಿಶ್ವವನ್ನೇ ಬೆರಗುಗೊಳಿಸುವಂತಹ ಸಾಹಿತ್ಯ ರಚನೆ ಮಾಡಿದರು. ಮನ-ಮನೆಗೆ ಮುಟ್ಟಿದ ಶರಣರ ಆ ನುಡಿಗಳು ಇಂದಿಗೂ ಸಹ ಜನಮಾನಸದಲ್ಲಿ ಪೂಜ್ಯ ಭಾವನೆಯಿಂದ ಹೃದಯದಲ್ಲಿ ಉಳಿದಿವೆ. ಅದರ ನಂತರ ೧೪-೧೫ನೇ ಶತಮಾನದಲ್ಲಿ ಹುಟ್ಟಿಕೊಂಡ ಕೀರ್ತನಾ ಸಾಹಿತ್ಯವೂ ಸಹ ಸಂಗೀತದ ಮೂಲಕ ಜನರನ್ನು ಜಾಗೃತಿಗೊಳಿಸಿತು. ಈ ವಚನ ಮತ್ತು ಕೀರ್ತನಾ ಸಾಹಿತ್ಯವು ಇಂದಿಗೂ ಸಹ ಗೌರವ ಭಾವನೆಯಿಂದ ಕಾಣಲ್ಪಡುತ್ತಿವೆ.

ಇದರ ಜೊತೆ-ಜೊತೆಗೆ ಜನಸಾಮಾನ್ಯರಿಂದ "ಜನಪದ ಸಾಹಿತ್ಯ' ಎಂಬ ಪ್ರಕಾರ ಹುಟ್ಟಿಕೊಂಡಿತು. ಒಬ್ಬರ ಬಾಯಿಯಿಂದ ಮತ್ತೊಬ್ಬರ ಬಾಯಿಗೆ ಹರಡಿದ ಸಾಹಿತ್ಯವನ್ನು ಜನಪದ ಸಾಹಿತ್ಯ ಎಂದು ಕರೆದರು. ತಲ-ತಲಾಂತರವಾಗಿ ಹರಿದು ಬಂದ ಇಂತಹ ಜನಪದ ಸಾಹಿತ್ಯದಲ್ಲಿ ಕಥೆ, ಹಾಡು, ಗಾದೆ, ಒಗಟು, ಒಡಪು, ಪಡೆನುಡಿ ಇಂತಹ ಹತ್ತಾರು ಪ್ರಕಾರಗಳನ್ನು ಕಾಣಬಹುದಾಗಿದೆ. ""ಕುರಿತೋದದೆಯಂ ಕಾವ್ಯ ಪ್ರಯೋಗ ಪರಿಣತಮತಿಗಳ್'' ಎಂಬ ಕವಿರಾಜಮಾರ್ಗಕಾರನ

ಮಾತಿನಂತೆ ಏನೂ ಅಕ್ಷರ ಕಲಿಯದ ಜನಸಾಮಾನ್ಯರಿಂದ ಇದು ರಚಿಸಲ್ಪಟ್ಟಿತು. ಅವು ಒಬ್ಬರಿಬ್ಬರಿಂದ ಅಥವಾ ಒಂದೇ ಕಾಲದಲ್ಲಿ ರಚಿತವಾದವುಗಳಲ್ಲ. ತಲ-ತಲಾಂತರವಾಗಿ ಹರಿದುಬಂದಿವೆ. ಇವು ಇಂದಿನ ಜಾಗತೀಕರಣದಯುಗಕ್ಕೂ ಮುಂದುವರೆದುಕೊಂಡು ಬಂದಿರುವುದು ಸಮಾಧಾನದ ಸಂಗತಿಯೇ ಆಗಿದೆ. ಈ ಸಾಹಿತ್ಯ ದಾಖಲಾಗಿ ಪುಸ್ತಕ ರೂಪದಲ್ಲಿ ಬಂದಿರುವುದೂ ಅದಕ್ಕೆ ಹೆಚ್ಚಿನ ಕಾರಣವೂ ಇರಬಹುದು. ೧೭-೧೮ನೇ ಶತಮಾನದಲ್ಲಿ ನಮ್ಮ ದೇಶವನ್ನಾಳಿದ ಬ್ರಿಟಿಷರು ಆಡಳಿತ, ದಬ್ಬಾಳಿಕೆ, ಧರ್ಮಪ್ರಚಾರದ ಜೊತೆ-ಜೊತೆಗೆ ಇಲ್ಲಿನ ಸಾಹಿತ್ಯ, ಸಂಸ್ಕೃತಿಗಳ ಬಗ್ಗೆ ಅಧ್ಯಯನ ಮಾಡಿದರು. ಎಲ್ಲೋ ಮರೆಯಾಗಿ ಗಮನಕ್ಕೆ ಬಾರದಂತಿದ್ದ ಶಾಸನ, ನಿರ್ಲಕ್ಷಕ್ಕೆ ಒಳಗಾಗಿದ್ದ ಸ್ಮಾರಕ, ಅರ್ಥವಾಗದೇ ಉಳಿದಿದ್ದ ಹಸ್ತಪ್ರತಿಗಳ ಮಹತ್ವವನ್ನು ತಿಳಿಸಿದರು. ನಮ್ಮವುಗಳನ್ನು ನಮಗೇ ಓದಿ ಅವುಗಳ ಅರ್ಥ ಹೇಳಿದರು. ಅವರು ಬರುವವರೆಗೂ ನಮಗೆ ಇವು ಅರ್ಥವಾಗದ ನಿಗೂಢಗಳಾಗಿದ್ದವು.

ಬ್ರಿಟಿಷರು ಕೇವಲ ಶಾಸನ, ಸ್ಮಾರಕ, ಹಸ್ತಪ್ರತಿ, ಗುಡಿ-ಗುಂಡಾರಗಳ ಬಗ್ಗೆಯಷ್ಟೇ ಅಧ್ಯಯನ ಮಾಡಲಿಲ್ಲ. ಜೊತೆಗೆ ಜನಪದ ಸಾಹಿತ್ಯವನ್ನೂ ಸಹ ಅಧ್ಯಯನ ಮಾಡಿದರು. ಕಥೆ, ಹಾಡು, ಗಾದೆಗಳನ್ನು ಸಂಗ್ರಹಿಸಿದರು. ಅವುಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿ ಹಂಚಿದರು. ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕ ನಂತರ ಬ್ರಿಟಿಷರು ತಮ್ಮ ದೇಶಗಳಿಗೆ ಮರಳಿದ ಬಳಿಕ, ನಮ್ಮ ಭಾರತೀಯ ವಿದ್ವಾಂಸರು ಪ್ರಾಚೀನ ಕನ್ನಡ ಸಾಹಿತ್ಯದ ಅಪ್ರಕಟಿತ ಎಷ್ಟೋ ಹಸ್ತಪ್ರತಿ, ವಚನ, ಕೀರ್ತನೆಗಳನ್ನು ಸಂಗ್ರಹಿಸಿದರು. ಅದರ ಜೊತೆಗೆ ಜನಪದ ಸಾಹಿತ್ಯದ ವಿವಿಧ ಪ್ರಕಾರಗಳಾದ ಕಥೆ, ಹಾಡು, ಒಗಟು, ಗಾದೆ ಮುಂತಾದವುಗಳನ್ನೂ ಸಹ ಸಂಗ್ರಹಿಸಿದರು. ಹಲಸಂಗಿ ಗೆಳೆಯರ ಬಳಗವಂತೂ ನಾಡಿನಾದ್ಯಂತ ತಿರುಗಿ ಗರತಿಹಾಡುಗಳನ್ನು ಸಂಪಾದಿಸಿ ಪ್ರಕಟಿಸಿದರು. ಆದರೆ ಬ್ರಿಟಿಷರಾಗಲಿ ಅಥವಾ ಸ್ವದೇಶಿ ವಿದ್ವಾಂಸರಾಗಲಿ ಜನಪದರಲ್ಲಿ ಬಳಕೆಯಲ್ಲಿದ್ದ ಬೈಗುಳಗಳನ್ನು ಸಂಗ್ರಹಿಸುವ ಕೆಲಸ ಮಾಡಲಿಲ್ಲಾ. ಈ ಬೈಗುಳಗಳು ಸಾಹಿತ್ಯದ ಪ್ರಕಾರ ಹೌದೋ ಅಲ್ಲವೋ ಎಂಬ ಚರ್ಚೆಗಳು ಒಂದುಕಡೆಯಾದರೆ; ಗಾದೆಗಳೋ ಅಥವಾ ಇನ್ನಾವ ಪ್ರಕಾರಗಳು ಎಂಬ ಜಿಜ್ಞಾಸೆ ಇನ್ನೊಂದುಕಡೆ. ಆದರೆ ಇಲ್ಲಿ ಅದು ಅಪ್ರಸ್ತುತ.

ನಾವು ಭಾರತೀಯರು, ಸಂಸ್ಕೃತಿಗೆ ಹೆಸರಾದವರು. ಮಾಡುವ ಕೆಲಸದಿಂದ ಹಿಡಿದು ಮಾತನಾಡುವ ನುಡಿಗಳೂ ಸಹ ಸಭ್ಯವಾಗಿರಬೇಕು. ಅಸಹ್ಯವಾಗಿ ಮಾತನಾಡುವುದು ನಮ್ಮಲ್ಲಿ ನಿಶಿದ್ಧವಾಗಿದೆ. ಹೀಗಿದ್ದರೂ ಕೆಲ ಸಂದರ್ಭಗಳಲ್ಲಿ ಜಗಳ, ಕಲಹ ಮತ್ಯಾವುದೋ ಕೆಟ್ಟಗಳಿಗೆಗಳಲ್ಲಿ ಕೋಪದಿಂದಲೋ ಅಥವಾ ಪ್ರೀತಿಯಿಂದಲೋ ಬೈಯುವ ಪ್ರಸಂಗಗಳು ಕಂಡುಬರುತ್ತಿವೆ. ಅವುಗಳಲ್ಲಿ ಎಷ್ಟೋ ಶಬ್ದಗಳು ಇಂದಿಗೂ ಸಹ ಬಳಕೆಯಲ್ಲಿವೆ. ಎಲ್ಲಾ ಬೈಗುಳಗಳು ಅಸಹ್ಯವಾಗಿಯೋ ಅಥವಾ ಅಶ್ಲೀಲವಾಗಿಯೋ ಇರುತ್ತವೆ ಎಂದು ಭಾವಿಸುವುದು ತಪ್ಪು. ಅವು ಅಸಹ್ಯ ಮತ್ತು ಅಶ್ಲೀಲದ ಜೊತೆಗೆ ಜ್ಞಾನ ಕೊಡುವ ಸುಭಾಷಿತಗಳೂ ಆಗಿವೆ ಎಂಬುದು ನನ್ನ ಭಾವನೆ.

ಸಾಮಾನ್ಯವಾಗಿ ಈ ಬೈಗುಳಗಳನ್ನು ಬೈಯ್ಯು, ಬೈಗುಳ, ಬೈಗಳ, ಬೈಗಳು, ಬೈಗುಳಗಳು, ಬಯ್ಗುಳು ಎಂಬಿತ್ಯಾದಿಗಳ ಹೆಸರಿನಲ್ಲಿ ಕರೆಯುತ್ತೇವೆ. ಹೆಚ್ಚಾಗಿ ಬೈಗುಳ ಎಂದು ಕರೆಯುವ ರೂಢಿ ಇದೆ. ""ಅವ್ನು ಏನ್ ಬೈಗುಳ ಬೈಯ್ತಾನರಿ" ಎಂದು ಸಂಬೋಧಿಸುತ್ತೇವೆ. ಹೀಗಾಗಿ ಜನಪದರಲ್ಲಿ "ಬೈಗುಳ' ಎಂಬ ಪದ ಹೆಚ್ಚಾಗಿ ಬಳಕೆ ಇರುವುದನ್ನು ನಾವು ಕಾಣಬಹುದು. ಕೆಲವು ಸಂದರ್ಭಗಳಲ್ಲಿ ಎಷ್ಟೇ ಸವಾನ್ಯರಾಗಿ, ಹಳ್ಳಿಗರಾಗಿದ್ದರೂ, ಜನಪದರಾಗಿದ್ದರೂ ಶಿಷ್ಠವಾಗಿ ಬಹಳ ಅರ್ಥಗರ್ಭಿತವಾಗಿ ಪಂಡಿತ ಪಾಮರರಂತೆ ಬಯ್ಯುವ ಶಬ್ದಗಳನ್ನೂ ಸಹ ನಾವು ಕಾಣಬಹುದು.

ಇಂದು ನಾವು ಈ ಬೈಗುಳಗಳನ್ನು ಅವುಗಳನ್ನು ಅಸಡ್ಡೆಯಿಂದ ಕಾಣುತ್ತಿದ್ದೇವೆ. ಅವು ಏನನ್ನು ಹೇಳುತ್ತಿವೆ ಎಂಬ ಅಂಶವನ್ನೂ ಸಹ ಗಮನಿಸದೇ ಅಲ್ಲಲ್ಲಿಗೆ ಸೀಮಿತಗೊಳಿಸಿಯೋ ಅಥವಾ ಬೈಯ್ದೋ ಮರೆತುಬಿಡುತ್ತಿರುವುದು ದುರಂತವೇ ಸರಿ. ಇವು ನಮ್ಮನ್ನು ಎಚ್ಚರಿಸುವ ಹಿತೋಪದೇಶದ ಮಾತುಗಳು ಎಂಬ ಪ್ರಜ್ಞೆ ನಮ್ಮಲ್ಲಿ ಇಲ್ಲದಿರುವುದಕ್ಕೆ ಇಂದು ಎಷ್ಟೋ ಬೈಗುಳಗಳು ಮರೆತುಹೋಗಿವೆ. ಜಾಗತೀಕರಣದ ಇಂದಿನ ದಿನಮಾನದಲ್ಲಿ ವಿದೇಶಿ ಸಂಸ್ಕೃತಿಗೆ ಮಾರುಹೋಗಿ ಪರಭಾಷೆಗಳಿಗೆ ಬಲವಂತವಾಗಿ ಜೋತುಬಿದ್ದಿದ್ದೇವೆ. ನಮ್ಮ ಸ್ವದೇಶಿ ಸಂಸ್ಕೃತಿ, ಭಾಷೆ, ಜನಪದ ಸಂಸ್ಕೃತಿಯ ಬಗ್ಗೆ ಅಸಡ್ಡೆಯನ್ನು ತೋರುತ್ತಿದ್ದೇವೆ. ಹೀಗೆ ಪರಭಾಷೆಯ ಹೇರಿಕೆ ಮುಂದುವರೆದರೆ ನಮ್ಮದೆಲ್ಲವನ್ನೂ ಮರೆತು

ಅರ್ಥವಿಲ್ಲದ ಅವುಗಳನ್ನು ಸ್ವೀಕರಿಸಿ ನಾವು ಅನರ್ಥವಾಗುತ್ತೇವೆ ಎಂಬ ಸತ್ಯವನ್ನು ತಿಳಿಯಬೇಕಿದೆ. ಮಕ್ಕಳು ಇಂಗ್ಲೀಷ್ ಓದುತ್ತಾ ನಮ್ಮ ಜನಪದ ಸಂಸ್ಕೃತಿಯನ್ನು ಮರೆಯುತ್ತಿದ್ದಾರೆ. ಹೀಗೆ ಮುಂದುವರೆದರೆ ಇನ್ನು ಕೆಲವೇ ವರ್ಷಗಳಲ್ಲಿ ಜನಪದ ಸಾಹಿತ್ಯದ ಕಥೆ, ಹಾಡು, ಗಾದೆಗಳನ್ನು ನಾವು ಮರೆತೇ ಹೋಗುತ್ತೇವೆ. ಜೊತೆಗೆ ಜನಪದ ಬೈಗುಳಗಳನ್ನೂ ಮರೆತು ಅನ್ಯ ಭಾಷೆಗಳ ಬೈಗುಳಗಳನ್ನು ಚಾಲ್ತಿಗೆ ತರುವ ಸಂಭವವಿದೆ. ಇಂತಹ ಪರಿಸ್ಥಿತಿಯಲ್ಲಿ ನಶಿಸಿ ಹೋಗುತ್ತಿರುವ ಬೈಗುಳಗಳನ್ನು ಸಂಗ್ರಹಿಸುವುದು ತೀರಾ ಅವಶ್ಯವಾಗಿದೆ. ಕನ್ನಡ ಭಾಷಾ ಉಪನ್ಯಾಸಕನಾದ ನಾನು ಅವುಗಳ ಸತ್ವವನ್ನು ಅರಿತಿದ್ದೇನೆ. ದಿನನಿತ್ಯ ಮಕ್ಕಳಿಗೆ ಜನಪದ ಸಾಹಿತ್ಯದ ಪಾಠ ಮಾಡುವ ನನಗೆ ಅದರ ಚರಿತ್ರೆ, ಹುಟ್ಟು-ಬೆಳವಣಿಗೆಯ ಜೊತೆಗೆ ಅದರ ಮಹತ್ವವೂ ಅರಿವಿದೆ. ಈ ಸಾಹಿತ್ಯದಲ್ಲಿ ಬರುವ ಮತ್ತು ದಾಖಲಾಗದ ಹಾಗೂ ಮರೆಯಾಗುತ್ತಿರುವ ಬೈಗುಳಗಳ ಬಗ್ಗೆ ಏನೋ ಒಂದು ಆಕರ್ಷಣೆ ಇದೆ. ಹೀಗಾಗಿ ಅವುಗಳನ್ನು ಸಂಗ್ರಹಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸಿ ಮುಂದಿನ ಪೀಳಿಗೆಗೆ ಕೊಂಡೊಯ್ಯಬೇಕೆಂಬುದು ನನ್ನ ಮಹದಾಶೆಯಾಗಿದೆ. ಹೀಗಾಗಿ ಅವುಗಳ ಮಹತ್ವ ಮನಗಂಡು ಕೊಪ್ಪಳ ಜಿಲ್ಲೆಗೆ ಸೀಮಿತಗೊಳಿಸಿ ಜಿಲ್ಲೆಯಲ್ಲಿ ಬಳಕೆಯಲ್ಲಿದ್ದ ಜನಪದ ಬೈಗುಳಗಳನ್ನು ಸಂಗ್ರಹಿಸಬೇಕೆಂದು ನಿರ್ಧರಿಸಿದೆ. ಅವುಗಳನ್ನು ಸಂಪಾದಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸುವ ಪ್ರಯತ್ನವೇ "ಕೊಪ್ಪಳ ಜಿಲ್ಲೆಯ ಜನಪದ ಬೈಗುಳ' ಈ ಕೃತಿ. ಈ ರೀತಿ ಪುಸ್ತಕ ಬರೆಯಬಹುದೇನೋ ಅಥವಾ ಸಂಗ್ರಹಿಸಬಹುದೇ ಎಂಬ ಅನುಮಾನ ಬಂದಿರಬಹುದು. ಅಂತಹ ಶಬ್ಧಗಳನ್ನು ಮಾತನಾಡುವುದು ಸರಿ ಎನಿಸಿದರೆ ಅವುಗಳನ್ನು ಸಂಗ್ರಹಿಸುವುದೂ ಸಹ ಅಷ್ಟೇ ಸೂಕ್ತ ಎಂಬುದು ನನ್ನ ಅನಿಸಿಕೆ.

ನನ್ನ ಗಮನಕ್ಕೆ ಬಂದಂತೆ ಈಗಾಗಲೇ ಈ ಜನಪದ ಬೈಗುಳ ಕುರಿತು ಕೆಲವು ಅಧ್ಯಯನಗಳು ನಡೆದಿವೆ. ಜನಪದ ವಿದ್ವಾಂಸರೂ ಹಾಗೂ ಗುಲಬರ್ಗಾ ವಿಶ್ವವಿದ್ಯಾಲಯದ ಅಧ್ಯಾಪಕರಾಗಿದ್ದ ಡಾ.ಮೃತ್ಯುಂಜಯ ಹೊರಕೇರಿಯವರು "ಉತ್ತರ ಕರ್ನಾಟಕದ ಬೈಗುಳಗಳು' ಎಂಬ ಗ್ರಂಥವನ್ನು ಹೊರತಂದಿದ್ದಾರೆ. ಅಲ್ಲದೇ ಮತ್ತೋರ್ವ ಉಪನ್ಯಾಸಕರಾದ ಡಾ. ಗವಿಸಿದ್ಧಪ್ಪ ಹಂದ್ರಾಳರವರು "ಬೈಗುಳಗಳಲ್ಲಿ ಮಹಿಳೆ' ಎಂಬ ಕಿರುಹೊತ್ತಿಗೆಯನ್ನು ಹೊರತಂದಿದ್ದಾರೆ. ಇದಲ್ಲದೇ ಇನ್ನು ಕೆಲವು

ಅಧ್ಯಯನಗಳು ನಡೆದಿವೆ. ಆದರೆ ನನ್ನದು ಸಂಪಾದನಾ ಕಾರ್ಯವಾಗಿದ್ದರಿಂದ ಆ ಅಧ್ಯಯನಗಳ ಕಡೆಗೆ ಹೆಚ್ಚು ಗಮನ ಹರಿಸಿರುವುದಿಲ್ಲ.

ಈ ಬೈಗುಳಗಳು ಹೆಚ್ಚಾಗಿ ಉತ್ತರ ಕರ್ನಾಟಕದಲ್ಲಿ ಬಳಕೆಯಲ್ಲಿವೆ. ಆದರೆ ಬೆಂಗಳೂರು, ಮೈಸೂರು, ಹಳೆಮೈಸೂರು, ಮಲೆನಾಡು ಅಥವಾ ಕರಾವಳಿ ಪ್ರದೇಶಗಳಲ್ಲಿ ಅವು ಬಳಕೆಯಲ್ಲಿ ಕಂಡುಬರುವುದಿಲ್ಲ. ಆ ಭಾಗದಲ್ಲಿ ಅತ್ಯಂತ ಗರಿಷ್ಠವಾಗಿ ಬೈಯುವ ಶಬ್ಧವೆಂದರೆ ""ಹೇ ಕೋತಿ" ಎಂಬುದು. ಇದು ನಮ್ಮ ಉತ್ತರ ಕರ್ನಾಟಕದಲ್ಲಿ ಅತ್ಯಂತ ಸಾಮಾನ್ಯವಾಗಿ ಬೈಯುವ ಶಬ್ಧ.

ನಾನು ಕೊಪ್ಪಳ ಜಿಲ್ಲೆಯಲ್ಲಿ ಬಳಕೆಯಲ್ಲಿರುವ ಬೈಯುವ ಶಬ್ಧಗಳನ್ನು ಮಾತ್ರ ಸಂಗ್ರಹಿಸಿದ್ದೇನೆ. ಇವು ಹೆಚ್ಚಾಗಿ ಕೊಪ್ಪಳ, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳ ಪರಿಸರದಲ್ಲಿ ಬಳಕೆಯಲ್ಲಿವೆ. ಇವು ಉತ್ತರ ಕರ್ನಾಟಕದ ಇತರ ಭಾಗಗಳಲ್ಲಿಯೂ ಬಳಕೆಯಲ್ಲಿರಬಹುದು. ಮತ್ತು ನಾನು ಸಂಗ್ರಹಿಸಿದ ಈ ಬೈಗುಳಗಳಲ್ಲಿ ಕೆಲ ಸಣ್ಣ-ಪುಟ್ಟ ಬದಲಾವಣೆಯೊಂದಿಗೆ ಉತ್ತರ ಕರ್ನಾಟಕದ ಬೇರೆ-ಬೇರೆ ಜಿಲ್ಲೆ, ಭಾಗ ಅಥವಾ ಪ್ರದೇಶಗಳಲ್ಲಿ ಬಳಕೆಯಲ್ಲಿರಬಹುದು. ಆದರೆ ನಾನು ಆ ಶಬ್ಧಗಳ ಬಗ್ಗೆ ಹೆಚ್ಚು ಗಮನ ಹರಿಸಿರುವುದಿಲ್ಲ. ಯಾಕೆಂದರೆ ನಾನು ಕೇವಲ ಕೊಪ್ಪಳ ಪರಿಸರದಲ್ಲಿ ಬಳಕೆಯಲ್ಲಿರುವ ಬೈಯುವ ಬೈಗುಳಗಳನ್ನು ಮಾತ್ರ ಕೇಂದ್ರವಾಗಿಟ್ಟುಕೊಂಡು ಸಂಗ್ರಹಿಸುವ ಪ್ರಯತ್ನ ಮಾಡಿದ್ದೇನೆ. ನನ್ನ ತಿಳುವಳಿಕೆ ಮತ್ತು ಗ್ರಹಿಕೆಯ ಆಧಾರದ ಮೇಲೆ ಜಿಲ್ಲೆಯಲ್ಲಿ ಬಳಕೆಯಲ್ಲಿರುವ ಶಬ್ದ ಮತ್ತು ವಾಕ್ಯಗಳನ್ನು ಸಂಗ್ರಹಿಸಿ ವಿಷಯ, ವಸ್ತು, ವಿಧಾನ ಮತ್ಯಾವುದೋ ವಿಷಯಗಳ ಮೇಲೆ ವಿಭಾಗ ಮಾಡಿಕೊಂಡು ೨೪ ಭಾಗಗಳಲ್ಲಿ ಸುಮಾರು ೧೩೫೦ಕ್ಕೂ ಅಧಿಕ ಬೈಗುಳಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದೇನೆ. ಕೆಲ ಶಬ್ದ ಮತ್ತು ವಾಕ್ಯಗಳು ೨-೩ ವಿಭಾಗಗಳಲ್ಲಿಯೂ ಪುನರಾವರ್ತನೆಯಾಗಿರಬಹುದು. ಯಾಕೆಂದರೆ ನಾನು ವಿಷಯಾವಾರು ಮಾಡಿಕೊಂಡಿರುವುದರಿಂದ ಕೆಲ ಶಬ್ದಗಳು ಅನಿವಾರ್ಯವಾಗಿ ಬೇರೆಯ ಭಾಗದಲ್ಲಿ ಬರುತ್ತವೆ. ಹೀಗಾಗಿ ಅದು ಪುನರಾವರ್ತನೆಯಾದರೂ ಅವು ಅನಿವಾರ್ಯ.

ನನ್ನ ಕೆಲ ಗೆಳೆಯರು ಈ ಬೈಗುಳಗಳ ಅರ್ಥ ಬರೆಯುತ್ತಾ ವಿಸ್ತರಿಸಿ ಸಂಗ್ರಹಿಸಿರಿ ಎಂಬ ಸಲಹೆ ಕೊಟ್ಟರು. ಆದರೆ ಅದು ಸಂಗ್ರಹ ಆಗುವುದಿಲ್ಲ. ಅಷ್ಟೂ ಶಬ್ದಗಳನ್ನು ವಿವರಿಸುತ್ತಾ ಹೋದರೆ ಅದೊಂದು ದೊಡ್ಡ ಗ್ರಂಥವಾಗುತ್ತದೆ. ಹೀಗಾಗಿ ನಾನು ಕೇವಲ ಬಳಸುತ್ತಿರುವ ಬೈಗುಳಗಳ ಶಬ್ಧಗಳನ್ನು ಮಾತ್ರ ಸಂಗ್ರಹಿಸಿದ್ದೇನೆ. ಆದರೆ ಜಾತಿ ಆಧರಿತ ಮತ್ತು ಸೊಂಟದ ಕೆಳಗಿನ ಬೈಗುಳಗಳನ್ನು ಓದುಗರಿಗೆ ಮುಜುಗರವಾಗಬಾರದೆಂಬ ಭಾವನೆಯಿಂದ ಆ ಶಬ್ದಗಳನ್ನು ಈ ಕೃತಿಯಲ್ಲಿ ಬಳಕೆ ಮಾಡಿರುವುದಿಲ್ಲ. ಅದರ ಮುಂದಿನ ಅಧ್ಯಯನ ವಿದ್ವಾಂಸರಿಗೆ, ಸಂಶೋಧಕರಿಗೆ, ಓದುಗರಿಗೆ ಬಿಟ್ಟಿದ್ದೇನೆ. ಇಲ್ಲಿರುವ ಬಹುತೇಕ ಬೈಗುಳಗಳು ಅಶ್ಲೀಲವಾಗಿಯೇ ಇರುತ್ತವೆ. ಅಂದ ಮಾತ್ರಕ್ಕೆ ಅವು ಸಂಗ್ರಹಕ್ಕೆ ಯೋಗ್ಯವಲ್ಲ ಎಂದು ಭಾವಿಸುವುದು ತರವಲ್ಲಾ. ನಾವು ಇಂತಹ ಬೈಗುಳಗಳನ್ನು ಸಂಗ್ರಹಿಸಲು ಹಿಂಜರಿದರೆ ಕೆಲವೇ ವರ್ಷಗಳಲ್ಲಿ ಅವು ನಮ್ಮಿಂದ ಮರೆಯಾಗುವುದು ಶತಸಿದ್ಧ.

–ಡಾ.ಸಿದ್ಧಲಿಂಗಪ್ಪ ಕೊಟ್ನೆಕಲ್
ಕನ್ನಡ ಉಪನ್ಯಾಸಕರು, ಕೊಪ್ಪಳ

ನಿವೇದನೆ......

ಕೊಪ್ಪಳ ಜಿಲ್ಲೆ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಗಳ ತವರೂರು. ಸು.೭-೮ನೇ ಶತಮಾನದಲ್ಲೇ ಈ ಭಾಗ "ತಿರಳ್ಗನ್ನಡನಾಡು' ಎಂದು ಕರೆಸಿಕೊಂಡಿದೆ. ಇಂತಹ ನಾಡಿನಲ್ಲಿ ಸಾಹಿತ್ಯಕ್ಕೆ ಕೊರತೆಯೇನಿಲ್ಲಾ. ಹಳೆಗನ್ನಡ, ನಡುಗನ್ನಡ, ಪುರಾಣ ಕಾವ್ಯಗಳೂ ಹೇರಳವಾಗಿ ರಚನೆಯಾಗಿವೆ. ಜನಪದ ಸಾಹಿತ್ಯವಂತೂ ಅಪಾರ ಪ್ರಮಾಣದಲ್ಲಿ ರಚನೆಯಾಗಿದೆ. ಹಾಡು, ಕಥೆ, ಗಾದೆ, ಒಗಟು, ಲಾವಣಿ ಹೀಗೆ ಅನೇಕ ಪ್ರಕಾರಗಳು ಈ ನೆಲದಲ್ಲಿ ಜನ್ಮತಳೆದಿವೆ. ಅದರ ಜೊತೆಗೆ ಜನಪದರಲ್ಲಿ ನಿತ್ಯ ಬಳಕೆಯಲ್ಲಿರುವ 'ಬೈಗುಳ'ಗಳು ಒಂದು ಅಪರೂಪವಾದ ಪ್ರಕಾರ. ಆದರೂ ಈ ಪ್ರಕಾರ ಅಲಕ್ಷಿತವಾಗಿಯೇ ಉಳಿದಿದೆ; ನಿತ್ಯ ಬಳಕೆಯಲ್ಲಿದ್ದರೂ ದಾಖಲಾಗಿಲ್ಲ. ಅವು ಬೈಗುಳ ಎನಿಸಿರಬಹುದು, ಆದರೂ ಅವು ಹಿತೋಪದೇಶವಾಗಿವೆ. ಹೀಗಾಗಿ ನಾನು ಅವುಗಳನ್ನು ಸಾಹಿತ್ಯಿಕ ರೂಪದಲ್ಲಿ ಕಾಣುತ್ತಿದ್ದೇನೆ. ನಿತ್ಯ ಮಕ್ಕಳಿಗೆ ಸಾಹಿತ್ಯದ ಪಾಠ ಮಾಡುವ ಶಿಕ್ಷಕ ನಾನು. ಜಾಗತೀಕರಣದ ಇಂದಿನ ಕಾಲದಲ್ಲಿ ಅವು ಮರೆಯಾಗುತ್ತಿವೆ ಎಂಬ ಅಂಶ ಮನಗಂಡು ಅವುಗಳನ್ನು ತಮ್ಮಿಂದಲೇ ಸಂಗ್ರಹಿಸಿ; ತಮ್ಮ ಮುಂದೆಯೇ ಇಡಬೇಕೆಂದು ನಿರ್ಧರಿಸಿದೆ. ಕೊಪ್ಪಳ ಜಿಲ್ಲೆಗೆ ಸೀಮಿತಗೊಳಿಸಿ 'ಕೊಪ್ಪಳ ಜಿಲ್ಲೆಯ ಜನಪದ ಬೈಗುಳ' ಎಂಬ ಕೃತಿಯ ಮೂಲಕ ಪ್ರಕಟಿಸಿ ತಮ್ಮ ಮುಂದೆ ಇಡುತ್ತಿದ್ದೇನೆ. ಇದನ್ನು ಲೋಕ ಹೇಗೆ ಸ್ವೀಕರಿಸತ್ತೆದೆಯೋ ನಾ ಕಾಣೆ. ಈ ಕೃತಿ ಹೊರಬರಲು ಕಾರಣೀಕರ್ತರನ್ನು ನೆನೆಯುವುದು ಅಗತ್ಯ.

ನನ್ನ ಎರಡು ದಶಕಗಳ ಸೇವಾವಧಿಯಲ್ಲಿ ಬೋಧನೆ, ಬರವಣಿಗೆ, ಸಂಶೋಧನೆ ಹೀಗೆ ಎಲ್ಲಾ ಸಂದರ್ಭಗಳಲ್ಲಿ ಸಹಕರಿಸಿದ ಡಾ.ಬಸವರಾಜ ಪೂಜಾರ ಇವರಿಗೆ ಅನಂತ ಧನ್ಯವಾದಗಳು. ಪ್ರಾಧ್ಯಾಪಕ ಮಿತ್ರರಾದ ಡಾ. ದಯಾನಂದ ಸಾಳುಂಕೆ, ಪ್ರೊ.ಶರಣಬಸಪ್ಪ ಬಿಳಿಎಲೆ, ಡಾ.ಚನ್ನಬಸವ, ಅಶೋಕ ಓಜಿನಹಳ್ಳಿ, ಗುರುರಾಜ ವೈ.ಜಿ, ಮುಂಡಲಿಕರೆಡ್ಡಿ ಆರ್.ಬಿ, ಡಾ.ವೀರೇಶಕುಮಾರ, ಎಸ್. ಅಗಸ್ಟಿನ್, ಡಾ.ಬಾಳಪ್ಪ ತಳವಾರ, ಕೆ.ಎಸ್.ದಂಡಿನ್, ಸಂತೋಷ ಗೌಡ, ಡಾ.ಮಂಜುನಾಥ ಬಡಿಗೇರ, ಡಾ.ಕರಿಬಸವೇಶ್ವರ, ಡಾ.ರಾಜು ಹೊಸಮನಿ, ಡಾ.ನಾಗರಾಜ ದಂಡೋತಿ,

ಡಾ.ಸುಂದರ ಮೇಟಿ, ಡಾ.ಅರುಣಕುಮಾರ ಎ.ಜಿ, ಪ್ರವೀಣಕುಮಾರ ಹಾದಿಮನಿ, ಡಾ.ಶಶಿಕಾಂತ ಉಮ್ಮಾಪುರೆ, ಡಾ.ಮಂಜುನಾಥ ಎಂ, ಡಾ.ಮಂಜುನಾಥ ಗಾಳಿ, ಡಾ.ಶರಣಪ್ಪ ಜಾಲಿಹಾಳ, ಶರಣಪ್ಪ ಚೌವ್ಹಾಣ, ಡಾ.ವೆಂಕಟೇಶ ನಾಯ್ಕ, ಮಹೇಶ ಬಿರಾದಾರ, ಡಾ.ಪ್ರಶಾಂತ ಕೊಂಕಲ, ವಿನೋದ ಮುದಿಬಸನಗೌಡರ್, ಮಂಜುನಾಥ ಕೀರ್ತಿಗೌಡ, ಶ್ರೀಮತಿ ಕಮಲ ಅಳವಂಡಿ, ಶ್ರೀಮತಿ ಗೀತಾ ಯಕ್ಲಾಸಪುರ, ಶ್ರೀಮತಿ ಮಂಗಳ ಡಂಬಳ, ಪ್ರತಾಪ ಬಿ.ವ್ಹಿ, ವಿನಯಕುಮಾರ ಎಚ್.ಎಂ, ಹನುಮೇಶ ಚೌಡಕಿ, ಈಶಪ್ಪ ದೊಡ್ಡಮನಿ, ಹನುಮಂತಪ್ಪ ಶೆಲ್ಯೂಡಿ, ಶಿವಯ್ಯ ಬಿ.ಎನ್, ಎಂ.ಡಿ.ಅಲಿ, ಅಕ್ಬರ್ ಖಾಸಿಂ, ಸಂಗಮೇಶ ಬೇವಿನಗಿಡದ ಮುಂತಾದವರ ಸಹಕಾರಕ್ಕೆ ಧನ್ಯವಾದಗಳು.

ನಮ್ಮ ಕಾಲೇಜಿನ ಕಚೇರಿ ಸಿಬ್ಬಂದಿಗಳಾದ ಅರುಣಕುಮಾರ ಪಾಟೀಲ, ಮಾನಪ್ಪ ಕಮ್ಮಾರ, ಅಶೋಕಕುಮಾರ ಗೋಗಿ, ಪ್ರಭುಗೌಡ ಪಾಟೀಲ, ಗೋಣಿಬಸಪ್ಪ ಗುಡ್ಲಾನೂರು, ಮಲ್ಲಣ್ಣ ಕಾತರಕಿ, ಶಿವರಾಜ ಹೊಸಮನಿ, ಮಹೇಶ ಹಿರೇಮಠ, ಗವಿಸಿದ್ಧಪ್ಪ ಕಡೆಮನಿ, ಶಿವರಾಜ ಉಂಕಿ ಮುಂತಾದವರ ಸಹಕಾರಕ್ಕೆ ನಮನಗಳು.

ಪ್ರೀತಿಯ ವಿದ್ಯಾರ್ಥಿಗಳಾದ ಶಶಿಕುಮಾರ ಉಳ್ಳಾಗಡ್ಡಿ, ಮುತ್ತಣ್ಣ ರಾಠೋಡ, ಮಾರುತಿ, ನಂದಿತಾ, ಶಿಲ್ಪಾ, ಶ್ರೀದೇವಿ, ಕಾವೇರಿ, ಯಮನಮ್ಮ ಮುಂತಾದವರ ಪ್ರೀತಿಗೆ ಧನ್ಯವಾದಗಳು. ಮಡದಿ ಮಂಜುಳಾ, ಮಗಳು ಮೇಘನಾ ಮತ್ತು ಮಗ ಶಶಾಂಕ ಇವರ ಪ್ರೋತ್ಸಾಹಕ್ಕೆ ನಮನಗಳು.

ಈ ಕೃತಿಗೆ ಮುನ್ನುಡಿ ಬರೆದ ಡಾ.ಹಂದ್ರಾಳ ಗವಿಸಿದ್ದಪ್ಪ ಮತ್ತು ಬೆನ್ನುಡಿ ಬರೆದ ಜನಕವಿ ರಮೇಶ ಗಬ್ಬೂರು ಇವರಿಗೆ ಅನಂತ ಧನ್ಯವಾದಗಳು. ಈ ಕೃತಿಯಷ್ಟೇ ಅಲ್ಲದೇ ನನ್ನ ಬಹುತೇಕ ಲೇಖನಗಳು ಮತ್ತು ಹಸ್ತಪ್ರತಿಗಳಲ್ಲಿನ ತಪ್ಪು-ಒಪ್ಪುಗಳನ್ನು ಸರಿಪಡಿಸುತ್ತಾ, ಒಂದೊಂದು ಅಕ್ಷರ, ಶಬ್ದ, ವಾಕ್ಯಗಳನ್ನೂ ಸಹ ತಿದ್ದುತ್ತಾ-ತೀಡುತ್ತಾ ಪುಸ್ತಕ ರೂಪದಲ್ಲಿ ಹೊರಬರಲು ಸಹಕರಿಸಿದ ಶ್ರೀ ಆದೇಶ ಎ.ಜಿ, ಪ್ರದೀಪ ಬಳ್ಳೊಳ್ಳಿ ಹಾಗೂ ಪರ್ವತಗೌಡ ಬಿ.ಎನ್ ಇವರಿಗೆ ಅನಂತನಂತದ ಧನ್ಯವಾದಗಳು. ಮುಖ್ಯವಾಗಿ ತಮ್ಮ-ತಮ್ಮ ಊರು, ಕೇರಿ ಮತ್ತು ಮನೆಗಳಲ್ಲಿ ಬಳಕೆಯಲ್ಲಿದ್ದ

ಅಂದವಾಗಿ ಮುದ್ರಿಸಿದ ಐಶ್ವರ್ಯ ಪ್ರಿಂಟಿಂಗ್ ಪ್ರೆಸ್‌ನ ಆನಂದ ಜಿ. ಗೊಂಡಬಾಳರವರಿಗೆ ಹಾಗೂ ಮುಖಪುಟ ವಿನ್ಯಾಸ ಮಾಡಿಕೊಟ್ಟ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರು ಹಾಗೂ ವಿದ್ವಾಂಸರಾದ ಡಾ. ಕೆ. ಕೆ. ಮಾಳೆಯವರಿಗೂ ಸಹ ಅನಂತ ಧನ್ಯವಾದಗಳು.

–ಡಾ.ಸಿದ್ಧಲಿಂಗಪ್ಪ ಕೊಟ್ನೆಕಲ್
ಕನ್ನಡ ಉಪನ್ಯಾಸಕರು, ಕೊಪ್ಪಳ

ಪರಿವಿಡಿ

ಪುರಾಣ ವ್ಯಕ್ತಿಗಳ ಮೇಲೆ ಬೈಗುಳ

೧. ಅಂತರಪಿಶಾಚಿ
೨. ಅಷ್ಟವಕ್ರ
೩. ಅಷ್ಟವಾಂಕ
೪. ಅಸುರ
೫. ಅಸುರರು
೬. ಇಧಿ
೭. ಇಧಿಮಾಯೆ
೮. ಕೆಂಚಮ್ಮ
೯. ಕಾಳಿ
೧೦. ಕಾಮಿ
೧೧. ಕಾವಿ
೧೨. ಕಿಂಕರ
೧೩. ಕಿಂಕರರು
೧೪. ಕಿರಾತಕ
೧೫. ಕೀಚಕ
೧೬. ಕೀಚಕರು
೧೭. ಕುಂಬಕರ್ಣ
೧೮. ಕೊಮರಾಮ
೧೯. ಗಾಳಿ
೨೦. ಗಾಳೆಪ್ಪ
೨೧. ಗಾಳೆಮ್ಮ
೨೨. ಗಾಳೆವ್ವ
೨೩. ಗೊಗ್ಗ

೨೪. ಗೊಗ್ಗಯ್ಯ
೨೫. ಚಂಡಿ
೨೬. ಚಂಡಿ–ಚಾಮುಂಡಿ
೨೭. ಚಾಮುಂಡಿ
೨೮. ಚಿತ್ರಗುಪ್ತ
೨೯. ಜರಾಸಂದ
೩೦. ಜೋಕುಮಾರ
೩೧. ಜೋಗತಿ
೩೨. ಜೋಗಪ್ಪ
೩೩. ಜೋಗಮ್ಮ
೩೪. ಜೋಗಯ್ಯ
೩೫. ಜೋಗವ್ವ
೩೬. ತಾಟಕಿ
೩೭. ತಾಟಗಿತ್ತಿ
೩೮. ತಾರಕ
೩೯. ದಶಕಂಠ
೪೦. ದುರ್ಗಪ್ಪ
೪೧. ದುರ್ಗಮ್ಮ
೪೨. ದುರ್ಗವ್ವ
೪೩. ದುರ್ಗಿ
೪೪. ದುರ್ಗಿ–ಮುರ್ಗಿ
೪೫. ದುರ್ಯೋಧನ

೪೬. ದುರ್ಯೋಧನರು
೪೭. ದುಶ್ಯಾಸನ
೪೮. ದೆವ್ವ
೪೯. ದೈತ್ಯ
೫೦. ನರಭಕ್ಷಕ
೫೧. ನರಭಕ್ಷಕರು
೫೨. ನರರಾಕ್ಷಸ
೫೩. ನರರಾಕ್ಷಸರು
೫೪. ನರರಾಕ್ಷಸಿ
೫೫. ನಕ್ಷತ್ರಿಕ
೫೬. ನಿಶುಂಭ
೫೭. ಪಿಶಾಚಿ
೫೮. ಪೆಡಂಭೂತ
೫೯. ಪ್ರೇತ
೬೦. ಪ್ರೇತಾತ್ಮ
೬೧. ಬಕಾಸುರ
೬೨. ಬಕಾಸುರರು
೬೩. ಭದ್ರಕಾಳಿ
೬೪. ಭದ್ರಿ
೬೫. ಭೂತ
೬೬. ಭೂತಕಾಳಿ
೬೭. ಮಸಣಿ

೬೮. ಮಹಾಕಾಳಿ
೬೯. ಮಹಿಷಾಸುರ
೭೦. ಮಹಿಷಾಸುರ ಮರ್ದಿನಿ
೭೧. ಮಾಂಕಾಳಿ
೭೨. ಮಾಂಕಾಳೆಮ್ಮ
೭೩. ಮಾರಿ
೭೪. ಮಾರಿಚ
೭೫. ಮಾರಿಮಸಣಿ
೭೬. ಮಾರೆಪ್ಪ
೭೭. ಮಾರೆಮ್ಮ
೭೮. ಮಾರೆವ್ವ
೭೯. ಮೂದೇವಿ
೮೦. ಯಮ
೮೧. ಯಮಧರ್ಮ
೮೨. ಯಮಧರ್ಮರಾಜ
೮೩. ಯಮಕಿಂಕರ
೮೪. ಯಮಕಿಂಕರರು
೮೫. ರಕ್ತಬೀಜಾಸುರ
೮೬. ರಕ್ತಬೀಜಾಸುರರು
೮೭. ರಾವಣ
೮೮. ರಾವಣರು
೮೯. ರಾಕ್ಷಸ
೯೦. ರಾಕ್ಷಸರು

ಅಜ್ಞಾನದ ಕುರಿತ ಬೈಗುಳ

೧. ಅರ್ಧಂಬರ್ಧ
೨. ಅಯೋಗ್ಯ
೩. ಅರಣ್ಯ ಪಂಡಿತ
೪. ಅರುವುಗೇಡಿ
೫. ಅರೆಹುಚ್ಚ
೬. ಅರೆಜ್ಞಾನಿ
೭. ಅಲಕ್ಷ್ಯ
೮. ಅಲಕ್ಷೀ
೯. ಅವಿವೇಕಿ
೧೦. ಅಜ್ಞಾನಿ
೧೧. ಊರಮೂಳ
೧೨. ಕಗ್ಗ
೧೩. ಕಬರಗೇಡಿ
೧೪. ಗಬ್ಬು
೧೫. ಗುಗ್ಗ
೧೬. ಗುಗ್ಗು
೧೭. ಗೊಗ್ಗು
೧೮. ಗೊಗ್ಗಯ್ಯ
೧೯. ಗೊಗ್ಯ
೨೦. ತಲೆಕೆಟ್ಟವ
೨೧. ತಲೆಕೆಟ್ಟವಳು
೨೨. ತಿಳಿಗೇಡಿ
೨೩. ತಿಳುವುಗೇಡಿ

೨೪. ತಲೆತಿರುಕ

೨೫. ತಲೆತಿರುಕಿ

೨೬. ದಡ್ಡ

೨೭. ದಡ್ಡಮುಂಡೆ

೨೮. ದಡ್ಡ ಶಿಖಾಮಣಿ

೨೯. ದಡ್ಡಿ

೩೦. ದಾಡಿಸಿ

೩೧. ದೀಡಪಂಡಿತ

೩೨. ದೀಡಶ್ಯಾಣ

೩೩. ನಾಡಮೂಳ

೩೪. ಪ್ಯಾಲಿ

೩೫. ಬುದ್ಧಿ ಇಲ್ಲದವ

೩೬. ಬುದ್ಧಿ ಇಲ್ಲದವಳು

೩೭. ಬುದ್ಧಿಗೇಡಿ

೩೮. ಬುದ್ಧಿಹೀನ

೩೯. ಭ್ರಮಗೇಡಿ

೪೦. ಮತಿಗೇಡಿ

೪೧. ಮತಿಗೆಟ್ಟವ

೪೨. ಮತಿಗೆಟ್ಟವಳು

೪೩. ಮತಿಹೀನ

೪೪. ಮಡ್ಡ

೪೫. ಮಡ್ಡು

೪೬. ಮಬ್ಬು

೪೭. ಮೂಳ
೪೮. ಮೊಬ್ಬು
೪೯. ಮೊಬ್
೫೦. ಲಜ್ಜೆ
೫೧. ಲಜ್ಜಗೇಡಿ
೫೨. ಲಜ್ಜೆಗೆಟ್ಟವಳು
೫೩. ಶ್ಯಾಣ್ಯಾ
೫೪. ಹುಚ್ಚ
೫೫. ಹುಚ್ಚಿ
೫೬. ಹುಚ್ಚಗೆಂಡಿ
೫೭. ಹುಚ್ಚಮಂಗ್ಯ
೫೮. ಹುಚ್ಚಪ್ಯಾಲಿ
೫೯. ಹುಚ್ಚರಂಡಿ
೬೦. ಹುಚ್ಚರಾಡ್ಯಾ

ಮನುಷ್ಯನ ಸ್ವಭಾವದ ಮೇಲಿನ ಬೈಗುಳ

೧. ಅಂಜುಬುರುಕ
೨. ಅರ್ಧ ಬಿಟ್ಟಾವಾ
೩. ಅಡಕಸಿಬಿ
೪. ಅಡಬಿಟ್ಟಿ
೫. ಅಡಾವುಡಿ
೬. ಅಡ್ನಾಡಿ
೭. ಅರಬ
೮. ಅರವುಗೆಂಡಿ
೯. ಅರವುಗೇಡಿ
೧೦. ಅರಿವಿಗೇಡಿ
೧೧. ಅರಿವುಗೆಂಡಿ
೧೨. ಅವಿವೇಕಿ
೧೩. ಅಸಹ್ಯಗೇಡಿ
೧೪. ಅಳವಿಗೇಡಿ
೧೫. ಆಕಾರಗೇಡಿ
೧೬. ಆಡಂಬರ ಮೂಳ
೧೭. ಆಯ್ಕಂಡು ತಿನ್ನಾವಾ
೧೮. ಉದ್ರಿ
೧೯. ಉಪದ್ಯಾಪಿ
೨೦. ಊರಿಗೆ ಬ್ಯಾಸರಾದಾವ
೨೧. ಊರಿಗೆ ಮಿಕ್ಕಿದಾವ
೨೨. ಊರಮಿಂಡ್ರಿ
೨೩. ಎರಡು ನಾಲಿಗೆಯವ

೨೪. ಎರಡು ಮುಖದವ
೨೫. ಎಲ್ಲಾ ಬಿಟ್ಟಾವ
೨೬. ಏಟುಬುದ್ಧಿ ಇಲ್ಲ
೨೭. ಏಳುಮಿಂಡ್ರಿ
೨೮. ಕಂಡಕಂಡಲ್ಲಿ ಕಾಲೆತ್ತವಾ
೨೯. ಕಂತ್ರಿ
೩೦. ಕಗ್ಗ
೩೧. ಕುಗ್ಗ
೩೨. ಕಚಡ
೩೩. ಕಚಡಾ
೩೪. ಕಚ್ಚೆರುಕ
೩೫. ಕಡೆಮಿಂಡ್ರಿ
೩೬. ಕಬರಗೇಡಿ
೩೭. ಕಬುರು-ಗಿಬುರು ಇಲ್ಲದವ
೩೮. ಕಳ್ಳ
೩೯. ಕಳ್ಳಿ
೪೦. ಕಾಮಕೂಸು
೪೧. ಕಿಡಿಗೇಡಿ
೪೨. ಕಿಲಿಗೇಡಿ
೪೩. ಕುಂಟ್ಲಗಿತ್ತಿ
೪೪. ಕುಂಡ್ಯಡಕ
೪೫. ಕುತಂತ್ರಿ
೪೬. ಕುರುಸಾಲೆ

೪೭. ಕುಲಗೆಟ್ಟವ
೪೮. ಕುಲಗೇಡಿ
೪೯. ಕೆಲಸ ಇಲ್ಲದವ
೫೦. ಕೆಲಸಕ್ಕೆ ಬಾರದವ
೫೧. ಕೊಲೆಗಡಕ
೫೨. ಕೊಲೆಗಾರ
೫೩. ಕೊಲೆಗಾತಿ
೫೪. ಕೊಲೆಪಾತಕಿ
೫೫. ಕೊಳಕ
೫೬. ಕೊಳಕು
೪೭. ಕೊಳ್ಕ
೫೮. ಖೋಡಿ
೫೯. ಖಾಲಿ ನನ್ಮಗ
೬೦. ಗಬ್ಬು
೬೧. ಗಬ್ಬು ನಾರವಾ
೬೨. ಗಬ್ಬುರಂಡಿ
೬೩. ಗಬ್ಬುರಾಡ್ಯಾ
೬೪. ಗಾತುಗಾ
೬೫. ಗುಗ್ಗು
೬೬. ಗೊಗ್ಗು
೬೭. ಗೊಗ್ಗಯ್ಯ
೬೮. ಗೊಬ್ಬು

೬೯. ಗೊಬ್ಬುನಾರವಾ

೭೦. ಚಿದಕ

೭೧. ಜಿಪುಣ

೭೨. ಜಿಬುಕಾ

೭೩. ಜಿಬುಕಿ

೭೪. ಜುಗ್ಗ

೭೫. ಜುಗ್ಗಿ

೭೬. ಟಕ್ಕ

೭೭. ಟಿಕ್ಕ

೭೮. ಡಗಾರ್

೭೯. ಡಬ್ಬಾ

೮೦. ಡೊಂಗಿ

೮೧. ಡೋಂಗಿ

೮೨. ತಲೆಕೆಟ್ಟದ್ದು

೮೩. ತಲೆಕೆಟ್ಟವಳು

೮೪. ತಲೆ ಕೆಟ್ಟಾವ

೮೫. ತಲೆ ತಿರುಕ

೮೬. ತಲೆಹಿಡುಕ

೮೭. ತಿಂಡಿ

೮೮. ತಿಂಡಿಪೋತ

೮೯. ತಿಕಲ

೯೦. ತಿಕ್ಲಾ

೯೧. ತಿಕ್ಲು
೯೨. ತಿರುಕಾ
೯೩. ತಿರುಬೋಕಿ
೯೪. ತುಕಾಲಿ
೯೫. ದಂಡಪಿಂಡ
೯೬. ದಂಡಿ ಹರಿಲಿ
೯೭. ದಮ್ಮಿಲ್ಲದವ
೯೮. ದರಿದ್ರ
೯೯. ದರಿದ್ರಗೇಡಿ
೧೦೦. ದರಿದ್ರದವನು
೧೦೧. ದರಿದ್ರದವಳು
೧೦೨. ದಾರಿತಪ್ಪಿದಾವ
೧೦೩. ದಾರಿತಪ್ಪಿದವಳು
೧೦೪. ದಾಸ
೧೦೫. ದಿವಾಳಿ
೧೦೬. ದುರುಳ
೧೦೭. ದೊಡ್ಡ ಸಾಚಾ
೧೦೮. ಧರ್ಮ ಬಿಟ್ಟಾವ
೧೦೯. ಧಿಮಾಕಿನವ
೧೧೦. ಧಿಮಾಕುಗೇಡಿ
೧೧೧. ಧೂರ್ತ
೧೧೨. ನಡಮುರುಕ

೧೧೩. ನಯವಂಚಕ
೧೧೪. ನರಪಿಳ್ಳೆ
೧೧೫. ನಾಚಿಕೆ ಇಲ್ಲದವ
೧೧೬. ನಾಚಿಕೆಗೇಡಿ
೧೧೭. ನಾಚಿಕೆಗೆಟ್ಟವ
೧೧೮. ನಾಚಿಕೆಗೆಟ್ಟವಳು
೧೧೯. ನಾಸ್ತಿಕ
೧೨೦. ನಿರ್ಗತಿಕ
೧೨೧. ನೀಚ
೧೨೨. ಪಡಶೆಟ್ಟಿ
೧೨೩. ಪರದೇಸಿ
೧೨೪. ಪಾಪ್ಗೆಂಡಿ
೧೨೫. ಪಾಪಗೇಡಿ
೧೨೬. ಪಾಪಿ
೧೨೭. ಪ್ಯಾಲಿ
೧೨೮. ಪಿಚ್ಚ
೧೨೯. ಪಿಚಗಣ್ಣು
೧೩೦. ಪಿಚಗಳ್ಳಿ
೧೩೧. ಪಿಸ್ರು
೧೩೨. ಪೀಡಕ
೧೩೩. ಪುಗ್ಸಟ್ಟೆ
೧೩೪. ಪೂರ್ತಿ ಬಿಟ್ಟಾವಾ
೧೩೫. ಪೂರಾ ಬಿಟ್ಟಾವಾ

೧೩೬. ಬಂಡಿಗಿ ಬಡ್ಡಿ
೧೩೭. ಬಂಡಗೆಟ್ಟಾವ
೧೩೮. ಬಂಡಗೆಟ್ಟವಳು
೧೩೯. ಬರಗೆಟ್ಟಾವ
೧೪೦. ಬರಗೆಟ್ಟವಳು
೧೪೧. ಬರ್ಗೆಟ್ಟವನು
೧೪೨. ಬಿಂಕದವ
೧೪೩. ಬಿಂಕದವಳು
೧೪೪. ಬಿಡಿಕಿ
೧೪೫. ಬುದ್ಧಿಗೇಡಿ
೧೪೬. ಬುದ್ಧಿಗೆಟ್ಟಾವ
೧೪೭. ಬುದ್ದಿಗೆಟ್ಟವಳು
೧೪೮. ಬೆಂಕಿ ಹಚ್ಚಾವ
೧೪೯. ಬೆಂಡ್ಲಾ
೧೫೦. ಬೆಂಡ್ಲು
೧೫೧. ಬೆಪ್ಪ
೧೫೨. ಬೆಲೆ ಇಲ್ಲದವ
೧೫೩. ಬೇವರ್ಸಿ
೧೫೪. ಬುದ್ಧಿಹೀನ
೧೫೫. ಭಂಡ
೧೫೬. ಮನಿಮುರುಕ
೧೫೭. ಮಬ್ಬ ಹಡಿಸಿಕೆ

೧೫೮. ಮಬ್ಬು
೧೫೯. ಮರ್ಯಾದೆ ಇಲ್ಲದಾವ
೧೬೦. ಮರ್ಯಾದೆ ಇಲ್ಲದವಳು
೧೬೧. ಮರ್ಯಾದಗೇಡಿ
೧೬೨. ಮರವುಗೇಡಿ
೧೬೩. ಮರುಳ
೧೬೪. ಮಾನ ಇಲ್ಲದಾವ
೧೬೫. ಮಾನ ಇಲ್ಲದವಳು
೧೬೬. ಮಾನಗೇಡಿ
೧೬೭. ಮಾನಗೆಟ್ಟಾವ
೧೬೮. ಮಾರಿನಾಡ
೧೬೯. ಮೊಬ್ಬು
೧೭೦. ಮಿಂಡ್ರಿ
೧೭೧. ಮಿಂಡ್ರಿಗುಟ್ಟಿದಾವ
೧೭೨. ಮಿಕ್ಕಿದಾವಾ
೧೭೩. ಮಿಕ್ಕಿದವಳು
೧೭೪. ಮಿಟಕಲಾಡಿ
೧೭೫. ಮುಚ್ಚಕಂಡು ಇರು
೧೭೬. ಮೂರು ಬಿಟ್ಟವಳು
೧೭೭. ಮೂರು ಬಿಟ್ಟಾವ
೧೭೮. ಮೂಳ
೧೭೯. ಲಂಗ

೧೮೦. ಲಜ್ಜಗೇಡಿ
೧೮೧. ಲಚಡ
೧೮೨. ಲಫಂಗ
೧೮೩. ಲುಚ್ಚ
೧೮೪. ಲುಚ್ಚಾ
೧೮೫. ಲೋಭಿ
೧೮೬. ವಂಚಕ
೧೮೭. ವಂಚಕಿ
೧೮೮. ವಿಕಾರಗೇಡಿ
೧೮೯. ವಿಷಕಾರಿ
೧೯೦. ವಿಷದವನು
೧೯೧. ಸುಬ್ಬ
೧೯೨. ಸುಬ್ಬಿ
೧೯೩. ಸುಳ್ಳ
೧೯೪. ಸುಳ್ಳಿ
೧೯೫. ಸುಳ್ಳುಬುರುಕ
೧೯೬. ಸೊಕ್ಕಿಂದು
೧೯೭. ಸೊಕ್ಕಿನದು
೧೯೮. ಸೊಕ್ಕಿನ ಮಗ
೧೯೯. ಸೊಕ್ಕಿನ ಮಗಳು
೨೦೦. ಸೊಕ್ಕಿನವನು
೨೦೧. ಸೊಕ್ಕಿನಾವ
೨೦೨. ಸೊಕ್ಕಿನವಳು

೨೦೩. ಸೊಕ್ಕಿನಾವ
೨೦೪. ಸೊನ್ನಿಗೇಡಿ
೨೦೫. ಹಡಬಿಟ್ಟಿ
೨೦೬. ಹಡಿಬಿಟ್ಟಿ
೨೦೭. ಹಡಿಸ್ಲಿ
೨೦೮. ಹಡುಕ
೨೦೯. ಹಾದರಗಿತ್ತಿ
೨೧೦. ಹುಚ್ಚ
೨೧೧. ಹುಚ್ಚಿ
೨೧೨. ಹುಚ್ಚಗೆಂಡಿ
೨೧೩. ಹುಚ್ಚಪ್ಯಾಲಿ
೨೧೪. ಹುಚ್ಚ ಹಡಿಸಿಕೆ
೨೧೫. ಹೆತ್ತಗಡಕ
೨೧೬. ಹೊಲಸು
೨೧೭. ಹೊಲಸುರಂಡಿ
೨೧೮. ಹೊಲಸುರಾಡ್ಯಾ

ಮನುಷ್ಯನ ಸಾವು ಕುರಿತ ಬೈಗುಳ

೧. ಅರಿಬ್ಯಾಗ ಸುತ್ಲಿ
೨. ಎಂತೆಂತೋರಿಗೆ ಬರ್‍ತಾದಾ ಇವಗ ಬರವಲ್ತು
೩. ಕುಣ್ಯಾಗಿಟ್ಟು ಕುಣಕಾಂತಾ ಬರ್ಲಿ
೪. ಕುಣ್ಯಾಗಿಟ್ಟು ಮನ್ಯಾಗ ಹುಡಕ್ಲಿ
೫. ಕೆಟ್ಟಬ್ಯಾನಿ ಬಂದು ಸಾಯ್ಲಿ
೬. ಗುಟ್ಟಿಗಿ ಬಡ್ಲಿ
೭. ಗೂಟುಕ ಬಡ್ಲಿ
೮. ಚಾಪ್ಯಾಗ ಸುತ್ಲಿ
೯. ಚಾಪ್ಯಾಗಾ ಸುತ್ಗಂಡು ಹೋಗ್ಲಿ
೧೦. ತಲಿಮ್ಯಾಗ ಮಣ್ಣಾಕ್ಲಿ
೧೧. ತಲಿಮ್ಯಾಗ ಹೂ ಏರ್‍ಸಲಿ
೧೨. ತಲೆಸಿಡುದು ಹೋಗ್ಲಿ
೧೩. ದಂಡಿಹರಿಲಿ
೧೪. ದಂಡಿಹರಿದು-ದೀಪಾರ್‍ಲಿ
೧೫. ನಾಶವಾಗಿ ಹೋಗ್ಲಿ
೧೬. ನಿಗುರಿಕೊಂಡು ಹೋಗ್ಲಿ
೧೭. ನಿನ್ನ ಬಾಯಾಗ ಮಣ್ಣಾಕ
೧೮. ನಿನ್ನ ಬಾಯಾಗ ಅಕ್ಕಿ ಹಾಕ
೧೯. ನಿನ್ನ ಸತ್ತು ಸುದ್ದಿ ಬರ್ಲಿ
೨೦. ನಿನ್ನ ಸಿದಿಗಿ ಕಟ್ಲಿ
೨೧. ನಿನ್ನ ಹೆಣ ಸುಡಲಿ
೨೨. ನಿನ್ನ ಹೆಜ್ಜಾಗ ಗೋದಿ ಬಿತ್ಲಿ

೨೩. ನಿನ್ನ ಹೆಜ್ಜಾಗ ನೆವಣಿ ಬಿತ್ಲಿ
೨೪. ನಿನ್ನ ಹೆಜ್ಜಾಗ ಸಜ್ಜೆ ಬಿತ್ಲಿ
೨೫. ನಿನ್ನ ಹೆಣ ಹೊರ್ಲಿ
೨೬. ನಿನ್ನ ಹೆಣ ಸಿಂಗಾರ ಮಾಡ್ಲಿ
೨೭. ನಿನ್ನ ಸೆದಿಗ್ಯಾಗ ಇಡ್ಲಿ
೨೮. ನಿನ್ನ ಹೆಣ ಸಿಂಗಾರಮಾಡಿ ಸಿದ್ಗಿ ಕಟ್ಲಿ
೨೯. ನೀ ಸತ್ತಲ್ಲಿ ಕತ್ತಿ ಹೊಳ್ಯಾಡ್ಲಿ
೩೦. ನೆಗದುಬಿದ್ದು ನೆಲ್ಲಿಕಾಯಿ ಆಗ್ಲಿ
೩೧. ನೆಗದುಬಿದ್ದು ಹೋಗ್ಲಿ
೩೨. ಮಕಾಮುಚ್ಚಾ
೩೩. ಮಕಾಮುಚ್ಲಿ
೩೪. ಮಣ್ಣಾಗಿಡ್ಲಿ
೩೫. ಮಣ್ಣಾಗ ಇಟ್ಟು ಮನ್ಯಾಗ ಹುಡುಕ್ಲಿ
೩೬. ಮಣ್ಣುಮುಚ್ಚಾ
೩೭. ಮಣ್ಣು ಮುಚ್ಲಿ
೩೮. ಮ್ಯಾಕ್ ಹೋಗ್ಲಿ
೩೯. ಮನಿಮುಂದ ಮಂಡಾಳ ಉಗ್ಲಿ
೪೦. ಮನಿಮುಂದ ಹೊಗಿಹಾಕ್ಲಿ
೪೧. ಮನಿಮುಂದ ಹೊಗೆ ಹಾಕ್ಲಿ
೪೨. ಮನೆ ಮುಚ್ಚಾ
೪೩. ಮನೆಮುಚ್ಲಿ
೪೪. ಮಿಂಡ್ರಿಕೊಂಡು ಹೋಗ್ಲಿ

೪೫. ಮುಕಾಮುಚ್ಚಾ
೪೬. ಮುಕಾಮುಚ್ಲಿ
೪೭. ಸತ್ತಸುದ್ದಿ ಬರ್ಲಿ
೪೮. ಸತ್ತಹೆಣ ಆಗ್ಲಿ
೪೯. ಸತ್ತಸುದ್ದಿ ಬರ್ಲಿ
೫೦. ಸತ್ತು ಸುಡುಗಾಡ ಸೇರ್ಲಿ
೫೧. ಸತ್ಯನಾಶ ಆಗ್ಲಿ
೫೨. ಸತ್ತೋಗು
೫೩. ಸತ್ತೋಗ್ಲಿ
೫೪. ಸಾಯಿ
೫೫. ಸುಡಗಾಡು ಸೇರು
೫೬. ಸುಡಗಾಡು ಸೇರ್ಲಿ
೫೭. ಸುಡಗಾಡ್ಯಗಿಟ್ಟು ಸುಣ್ಣ ಬಡಿಲಿ
೫೮. ಸುಡುಗಾಡ್ಯಾಗಿಟ್ಟು ಮನ್ಯಾಗ ಹುಡಕ್ಲಿ
೫೯. ಸೆಟಗಂಡ ಹೋಗ್ಲಿ
೬೦. ಸೆಟಗೊಂಡ ಹೋಗ್ಲಿ
೬೧. ಸ್ಮಶಾನದಾಗ ಸುಡ್ಲಿ
೬೨. ಸ್ಮಶಾನ ಸೇರು
೬೩. ಸ್ಮಶಾನ ಸೇರ್ಲಿ
೬೪. ಹಲಗಿ ಬಾರ್ಸಲಿ
೬೫. ಹೆಣ ಎತ್ಲಿ
೬೬. ಹೆಣ ಗೂಟಕ ಬಡಿಲಿ

೬೭. ಹೆಣ ಸುಡ್ಲಿ
೬೮. ಹೆಜ್ಜಾಗ ಗೂಟಾ ಬಡ್ಲಿ
೬೯. ಹೆಣ ಗೂಟಕ ಬಡಿಲಿ
೭೦. ಹೆಣ ಸುಡ್ಲಿ
೭೧. ಹೆಜ್ಯಾಗ ಗೂಟಾ ಬಡಿಲಿ
೭೨. ಹೆಣ ಸಿಂಗಾರ ಮಾಡ್ಲಿ
೭೩. ಹೆಣ ಸಿಂಗಾರ ಮಾಡಿ ಸಿದಗಿ ಕಟ್ಲಿ
೭೪. ಹೋದಲ್ಲೆಲ್ಲಾ ಸಜ್ಜಿ ಬಿತ್ತಲಿ
೭೫. ಹೋದಲ್ಲೆಲ್ಲಾ ಸತ್ತ ಸುದ್ದಿ ಬರ್ಲಿ

ಮನುಷ್ಯನ ಅವಯವಗಳ ಮೇಲಿನ ಬೈಗುಳ

೧. ಅಜಾನುಬಾಹು
೨. ಎರಡು ನಾಲಿಗೆಯವನು
೩. ಕಣ್ಣಕಿತ್ತು ಗೋಲಿ ಆಡುತೀನಿ
೪. ಕಣ್ಣಾಗ ಮಣ್ಣಾಕ್ಲಿ
೫. ಕಣ್ಣಾಗ ಕಾರ್ಮುಡಿ ತುಂಬ್ಲಿ
೬. ಕಾಲಿಗೆ ಹುಳಕಡ್ಲಿ
೭. ಕಾಲಿಗೆ ಕೆಟ್ಟಹುಳ ಮುಟ್ಲಿ
೮. ಕಾಲಿಗೆ ಮುಳ್ಳು ಚುಚ್ಚಲಿ
೯. ಕಾಲು ಮುರ್ಲಿ
೧೦. ಕಾಲು ಸೀದು ಹೋಗ್ಲಿ
೧೧. ಕಾಲು ಸೇದು ಹೋಗ್ಲಿ
೧೨. ಕಾಲು ಸೆಟದು ಹೋಗ್ಲಿ
೧೩. ಕಿವುಡ
೧೪. ಕಿವುಡಿ
೧೫. ಕಿವುಡ ನನ್ನ ಮಗ
೧೬. ಕಿಸ್ಬಾಯಿ
೧೭. ಕಿಸ್ಬಾಯಿ ದಾಸ
೧೮. ಕುಂಟ
೧೯. ಕುಂಟಕಾಲು
೨೦. ಕುಂಟಗಾಲು
೨೧. ಕುಂಟಿ
೨೨. ಕುಲ್ಡ
೨೩. ಕುಲ್ಡಗಣ್ಣು

೨೪. ಕುಲ್ಡಿ
೨೫. ಕುಳ್ಳ
೨೬. ಕುಳ್ಳಮಿಂಡ್ರಿ
೨೭. ಕುಳ್ಳಿ
೨೮. ಕೈ ಮುರ್ಲಿ
೨೯. ಕೈ ಸೇದ ಹೋಗ್ಲಿ
೩೦. ಕೈ ಸೆಟದು ಹೋಗ್ಲಿ
೩೧. ಕೈಗೆ ಕರಿನಾಗರ ಹಾವು ಕಚ್ಲಿ
೩೨. ಕೈಗೆ ಕರಿನಾಗರ ಕಡ್ಲಿ
೩೩. ಕೈಗೆ ಮುಳ್ಳು ಚುಚ್ಚಲಿ
೩೪. ಕೈ ಸೀದು ಹೋಗ್ಲಿ
೩೫. ಗಿಡ್ಡ
೩೬. ಗಿಡ್ಡಿ
೩೭. ಚರ್ಮ ಸುಲಿತೀನಿ
೩೮. ಚೊಂಚ
೩೯. ಚೊಂಚಕ್ಕೈ
೪೦. ಚೊಂಚಗ್ಗೈ
೪೧. ಚೊಂಚಕಾಲು
೪೨. ಚೊಂಚಗಾಲು
೪೩. ಡುಮ್ಮ
೪೪. ಡುಮ್ಮಿ
೪೫. ಡುಮ್ಮಕ್ಕ

೪೬. ಡುಮ್ಮವ್ವ
೪೭. ಡುಮ್ಮಿ
೪೮. ತಲಿ ಕೆಟ್ಟದ್ದು
೪೯. ತಲೆಕೆಟ್ಟವನು
೫೦. ತಲೆಕೆಟ್ಟವಳು
೫೧. ತಲೆತಿರುಕ
೫೨. ನಾಲಿಗೆ ಸೀದು ಹೋಗ್ಲಿ
೫೩. ನಾಲಿಗಿ ಸೇದು ಹೋಗ್ಲಿ
೫೪. ನಾಲಿಗಿ ಬಿದ್ದ ಹೋಗ್ಲಿ
೫೫. ನಾಲಿಗಿಗಿ ಹುಳಬಿಳ್ಲಿ
೫೬. ನಿನ್ನ ಕಣ್ಣಾಗ ಕಾರ್‌ಪುಡಿ ತುಂಬ್ಲಿ
೫೭. ನಿನ್ನ ಬಾಯಾಗ ಕೆರ
೫೮. ನಿನ್ನ ಬಾಯಾಗ ಸೆಗಣಿ ತುರುಕಾ
೫೯. ಪಿಚಗಣ್ಣು
೬೦. ಬಾಯಾಗ ಅಕ್ಕಿ ಹಾಕ
೬೧. ಬಾಯ್ಯಾಗ ಮಣ್ಣಾಕ್ಲಿ
೬೨. ಬಾಯಿ ಬೀಳ್ಲಿ
೬೩. ಬಾಯಿ ಮುಚ್ಚಗಂಡು ಹೋಗು
೬೪. ಬಾಯಿ ಸೀದು ಹೋಗ್ಲಿ
೬೫. ಬಾಯಿ ಸೇದು ಹೋಗ್ಲಿ
೬೬. ಬೊಕ್ಕತಲೆ
೬೭. ಬೊಚ್ಚಬಾಯಿ
೬೮. ಮುಕುಳಿ ತುಂಬಿದವ

೬೯. ಮುಕಳಿ ಮುಚಕಂಡು ಹೋಗು
೭೦. ಮುಕಳೆಪ್ಪ
೭೧. ಮುಖಕ್ಕೆ ಮಂಗಳಾರತಿ ಎತ್ತಿ
೭೨. ಮುಖ ಮುಚ್ಚಲಿ
೭೩. ಮುಖ ಮೂತಿ ಮುಚ್ಚ
೭೪. ಮೆಳ್ಳಗಣ್ಣು
೭೫. ಮೈಯ್ಯಾಗಿನ ಸೊಕ್ಕು
೭೬. ಮೊಂಡು ಮೂಗು
೭೭. ಮೊಂಡು ಕೈ
೭೮. ಮೊಂಡು ಗೈ
೭೯. ಲಂಬು
೮೦. ಲಂಬೋಧರ
೮೧. ಸೊಟ್ಟ
೮೨. ಸೊಟ್ಟ ಕಾಲು
೮೩. ಸೊಟ್ಟಬಾಯಿ
೮೪. ಸೊಟ್ಟಮಾರಿ
೮೫. ಹಲ್ಲಕಿಸ್ಕ
೮೬. ಹಲ್ಲಕಿಸ್ಗ
೮೭. ಹಲ್ಲಬೀರ
೮೮. ಹೊಟ್ಟೆ ಉರ್ಲಿ
೮೯. ಹೊಟ್ಟೆಹೊಡ್ಲಿ
೯೦. ಹೊಟ್ಟೆಗೆನುತಿಂತಿ

೯೧. ಹೊಟ್ಟೆಬ್ಯಾನೆ ಬರ್ಲಿ
೯೨. ಹೊಟ್ಟೆ ಉರ್ಲಿ
೯೩. ಹೊಟ್ಟೆಹೊಡ್ಲಿ
೯೪. ಹೊಟ್ಟೆಗೆನುತಿಂತಿ
೯೫. ಹೊಟ್ಟೆಬ್ಯಾನೆ ಬರ್ಲಿ

ವಂಶಾವಳಿ ಕುರಿತ ಬೈಗುಳ

೧. ಎಂತರ ಹೊಟ್ಯಾಗ ಎಂತವರು ಹುಟ್ಟೀರಿ
೨. ಕೀಚಕನ ವಂಶದವಾ
೩. ಕಿಡಿಗೇಡಿ ಕುಲ
೪. ಕಿಲಗೇಡಿ ಕುಲ
೫. ಕುಂಭಕರ್ಣ ವಂಶದವರು
೬. ದಾನಸೂರ ವಂಶದಾವ
೭. ದುರುಳ ವಂಶ
೮. ನಕ್ಷತ್ರಿಕ ವಂಶದಾವ
೯. ನಾಯಿಕುಲ
೧೦. ನಾಯಿಜಾತಿ
೧೧. ನಾಯಿವಂಶ
೧೨. ನಿನ್ನ ವಂಶ ನಿರ್ವಂಶವಾಗ್ಲಿ
೧೩. ನಿಮ್ಮ ಮನಿಮಂದಿ ನಾಶವಾಗ್ಲಿ
೧೪. ನಿಮ್ಮ ಮನಿಮಂದಿ ಹಾಳಾಗಿ ಹೋಗ್ಲಿ
೧೫. ಪಿಶಾಚಿ ವಂಶದವರು
೧೬. ಭೂತಯ್ಯನವಂಶ
೧೭. ಮನೆ ಮುಚ್ಲಿ
೧೮. ಮನೆ ಮುರ್ಲಿ
೧೯. ರಾವಣ ವಂಶದವರು
೨೦. ರಾಕ್ಷಸ ಕುಲ
೨೧. ರಾಕ್ಷಸ ಕುಲದವರು
೨೨. ವಂಶನಾಶವಾಗ್ಲಿ
೨೩. ವಂಶನಾಶವಾಗಿ ಹೋಗ್ಲಿ
೨೪. ವಂಶ ನಿರ್ವಂಶವಾಗ್ಲಿ

೨೫. ಶಕುನಿ ಕುಲ
೨೬. ಶಕುನಿ ವಂಶದವಾ
೨೭. ಹಂದಿಕುಲ
೨೮. ಹಂದಿಜಾತಿ
೨೯. ಹಂದಿಮಂದಿ
೩೦. ಹಂದಿವಂಶ

ಮಹಿಳೆಯರಿಗೆ ಬೈಗುಳ

೧. ಊರರಂಡಿ
೨. ಕಬರಗೆಟ್ಟವಳು
೩. ಕಾಲಜಾರಿದವಳು
೪. ಕೊಲೆಗಾತಿ
೫. ಗತಿ ಇಲ್ಲದವಳು
೬. ಗಾಂಚಾಲಿ
೭. ಗಾಂಚಾಳಿ
೮. ಚಿನಾಲಿ
೯. ಜಗಳಗಂಟಿ
೧೦. ಡುಮ್ಮಕ್ಕ
೧೧. ಡುಮ್ಮಿ
೧೨. ಡುಮ್ಮವ್ವ
೧೩. ತಾಟಕಿ
೧೪. ತಾಟಗಿತ್ತಿ
೧೫. ತುಡುಗು
೧೬. ದಡ್ಡಮುಂಡೆ
೧೭. ದಡ್ಡಿ
೧೮. ನೀತಿಗೆಟ್ಟವಳು
೧೯. ಬಂಜೆ
೨೦. ಬಿಂಕದವಳು
೨೧. ಬಿಡಿಕಿ
೨೨. ಬಿತ್ರಿ
೨೩. ಬೋಸುಡಿ

೨೪. ಮರ್ಯಾದೆಗೆಟ್ಟವಳು
೨೫. ಮಾನಗೆಟ್ಟವಳು
೨೬. ಮಿಟಕಲಾಡಿ
೨೭. ಮುಂಡೆ
೨೮. ರಂಡಿ
೨೯. ರಂಡಿಕಿ
೩೦. ರಂಡೆ
೩೧. ರಂಡೆ ಮುಂಡೆ
೩೨. ಲಜ್ಜೆ
೩೩. ಲಜ್ಜೆಗೇಡಿ
೩೪. ವಯ್ಯಾರಿ
೩೫. ವೇಶ್ಯೆ
೩೬. ವ್ಯಭಿಚಾರಿ
೩೭. ವ್ಯಭಿಚಾರಿಣಿ
೩೮. ಶೀಲಗೇಡಿ
೩೯. ಶೀಲಗೆಟ್ಟವಳು
೪೦. ಸುಬ್ಬಕ್ಕ
೪೧. ಸುಬ್ಬಮ್ಮ
೪೨. ಸುಬ್ಬವ್ವ
೪೩. ಸುಬ್ಬಿ
೪೪. ಸೂಳೆ
೪೫. ಸೋಗನಾತಿ
೪೬. ಸೋಗಲಾಡಿ

೪೭. ಸೋಗಲಾಡಿಸುಬ್ಬಿ
೪೮. ಹಲ್ಕಟ್‌ರಂಡಿ
೪೯. ಹಾದರಗಿತ್ತಿ
೫೦. ಹಾದರದವಳು
೫೧. ಹುಚ್ಚಮ್ಮ
೫೨. ಹುಚ್ಚರಂಡಿ
೫೩. ಹುಚ್ಚಸೂಳೆ
೫೪. ಹುಚ್ಚಿ

ಮಹಿಳೆಯರ ಕುರಿತ ಪುರುಷರಿಗೆ ಬೈಗುಳ

೧. ಕಂತ್ರಿ ನನ್ಮಗಾ
೨. ಕಳ್ಳನನ್ಮಗಾ
೩. ಗಬ್ಬು ನನ್ಮಗ
೪. ಗೊಬ್ಬು ಸೂಳೆಮಗ
೫. ಚಪ್ಪರ್ ನನ್ಮಗಾ
೬. ತಗಡು ನನ್ಮಗಾ
೭. ನಿಮ್ಮಕ್ಕನ್
೮. ನಿಮ್ಮಜ್ಜಿ
೯. ನಿಮ್ಮಮ್ಮನ್
೧೦. ನಿಮ್ಮವ್ವನ್
೧೧. ಬೋಸುಡಿ ಮಗ
೧೨. ಬೋಳಿಮಗ
೧೩. ಮಬ್ಬು ನನ್‌ಮಗ
೧೪. ಮಿಂಡ್ರಿಗುಟ್ಟಿದವ
೧೫. ಮಿಂಡ್ರಿಮಗ
೧೬. ಮಿಟಕಲಾಡಿಮಗ
೧೭. ಮುಂಡೆಮಗ
೧೮. ಮುಂಡೆಗುಟ್ಟಿದವ
೧೯. ಮೂರು ತಿಂಗಳಿಗೆ ಹುಟ್ಟಿದವ
೨೦. ರಂಡಿಮಗ
೨೧. ಲಂಗಾನನ್ಮಗ
೨೨. ಲಂಗಾ ಸೂಳೆಮಗ
೨೩. ಲಜ್ಜಗೇಡಿ ಸೂಳೆಮಗ

೨೪. ಲಡ್ಡ ಸೂರ್ ಸೂಳೆಮಗ
೨೫. ಸೂಳೆಮಗ
೨೬. ಹನ್ನೆರಡು ಮಂದಿಗಿ ಹುಟ್ಟಿದವ
೨೭. ಹಲ್‌ಕಟ್ ನನ್‌ಮಗ
೨೮. ಹಾದರಗಿತ್ತಿ ಮಗ
೨೯. ಹುಚ್ಚರಂಡಿ ಮಗ
೩೦. ಹುಚ್ಚ ಸೂಳೆಮಗ

ಸ್ವ-ನಿಂದನೆ ಬೈಗುಳ

೧. ಅರುವುಗೇಡಿ ನಾ
೨. ಅವಿವೇಕಿನಾ
೩. ಅಜ್ಞಾನಿನಾ
೪. ಊರಾಡಿದ ಸೂಳೆಮಗಾನಾ
೫. ಎರಡು ಮುಕದವನಾ
೬. ಕತ್ತೆನಾ
೭. ಕೆಟ್ಟನನ್ಮಗನಾ
೮. ತಲೆಕೆಟ್ಟವನಾ
೯. ತಲೆತಿರುಕನಾ
೧೦. ತಿಕ್ಕಸೂಳೆಮಗನಾ
೧೧. ತಿರುಬೋಕಿನಾ
೧೨. ದನನಾ
೧೩. ನನ್ನ ಹಣೆಬರಹ ಹಾಳಾಗಿ ಹೋಗ್ಲಿ
೧೪. ನಾಕತ್ತೆ
೧೫. ನಾ ಮಂಗ್ಯಾಸೂಳೆಮಗಾ
೧೬. ನಾ ಸಾಯ್ಲಿ ಬಿಡು
೧೭. ನಾ ಹುಚ್ಚುಸೂಳೆ ಮಗಾ
೧೮. ಪ್ರಾಣಿನಾ
೧೯. ಬುದ್ಧಿ ಇಲ್ಲದವನಾ
೨೦. ಬುದ್ಧಿಗೇಡಿನಾ
೨೧. ಮಬ್ಬುನಾ
೨೨. ಮಬ್ಬು ಸೂಳೆಮಗ ನಾ
೨೩. ರಂಡಿಮಗನಾ

೨೪. ಸುವ್ವರ್‌ನಾ
೨೫. ಸೂಳೆನಾ
೨೬. ಹಡಕಸ್ಬಿನಾ
೨೭. ಹಲ್ಕಟ್‌ನಾ
೨೮. ಹುಚ್ಚನಾ
೨೯. ಹುಚ್ಚಸೂಳೆಮಗನಾ

ಹೋಲಿಕೆಯ ಬೈಗುಳ

೧. ಅಕಿನನೋಡು
೨. ಅವನಂಗ ಆಗು
೩. ಅವ್ನಕಾಲ ಕೆಳಗೆ ನುಗ್ಗು
೪. ಅವ್ನಕೂದಲಕ್ಕೆ ಸಮ ಅಲ್ಲ
೫. ಅವ್ನಂಗನಡಿ
೬. ಅವ್ನಚಪ್ಪಲಿಗೆ ಸಮ ಅಲ್ಲ
೭. ಅವ್ನನೋಡು
೮. ಅವ್ನನೋಡಿ ಕಲಿ
೯. ಅವ್ನಪಾದ ನೆಕ್ಕು
೧೦. ಅವ್ನಪಾದಕ್ಕೆ ಸಮ ಅಲ್ಲ
೧೧. ಅವ್ನಪಾದದ ಧೂಳಿಗೆ ಸಮ ಅಲ್ಲ
೧೨. ಅವ್ನಯಕ್ಕಡಕ್ಕೆ ಸಮ ಅಲ್ಲ
೧೩. ಅವ್ನಗೆ ಸಮ ಅಲ್ಲ
೧೪. ನನ್ನ ಕೆರಕ್ಕೆ ಸಮಅಲ್ಲ ಅವ್ನು
೧೫. ನನ್ನ ಕೂದಲಕ್ಕ ಸಮಅಲ್ಲ ಅವ್ನು
೧೬. ನನ್ನ ಧೂಳಿಗೆ ಸಮಅಲ್ಲ ಅವ್ನು
೧೭. ನನ್ನ ಪಾದಕ್ಕೆ ಸಮಅಲ್ಲ ಅವ್ನು
೧೮. ನನ್ನ ಪಾದದ ಧೂಳಿಗೆ ಸಮಅಲ್ಲ ಅವ್ನು

ಪ್ರಾಣಿ ಮತ್ತು ಪಕ್ಷಿಗಳ ಹೆಸರಿನಲ್ಲಿ ಬೈಗುಳ

೧. ಆಕಳ ಮುಖ ಕತ್ತಿ ಹೊದಿಕಿ
೨. ಉಡ ಹಿಡಿದಂಗ
೩. ಊಸರವಳ್ಳಿ
೪. ಎಮ್ಮೆ
೫. ಎಮ್ಮೆಯಂತಾವ
೬. ಎಮ್ಮೆ ಕಾಯವಾ
೭. ಒಂಟಿಪ್ರಾಣಿ
೮. ಒಂಟೆಯಂತವಾ
೯. ಕಂತ್ರಿ ನಾಯಿ
೧೦. ಕಜ್ಜಿನಾಯಿ
೧೧. ಕತಿಗರ್ಕ
೧೨. ಕತ್ತೆ
೧೩. ಕತ್ತೆ ಕಾಯವಾ
೧೪. ಕತ್ತೆ ಬಾಲ ಕುದುರೆ ಜುಟ್ಟು
೧೫. ಕತ್ತೆಯಂತಾವ
೧೬. ಕತ್ತೆಕಿರ್ಬ
೧೭. ಕತ್ತೆಬಾಲ
೧೮. ಕಬ್ಬಿಣ ಚೇಳು
೧೯. ಕಟ್ಟಿರಿಬೆ
೨೦. ಕಪ್ಪೆ
೨೧. ಕಮಂಗಿ
೨೨. ಕರಿಕಾಗಿ
೨೩. ಕರಿಚೇಳು

೨೪. ಕರಿನಾಗ
೨೫. ಕರಿನಾಗರ
೨೬. ಕರಿನಾಗರಾವು
೨೭. ಕರಿನಾಯಿ
೨೮. ಕರಿಹಂದಿ
೨೯. ಕರಿಹೆಗ್ಗಣ
೩೦. ಕಳ್ಳ ಬೆಕ್ಕು
೩೧. ಕಾಗಿ
೩೨. ಕಾಗಿಮುಖ
೩೩. ಕಾಗಿಬಣ್ಣ
೩೪. ಕಾಗಿಮುಸುಡಿ
೩೫. ಕಾಡಂದಿ
೩೬. ಕಾಡುಕಿರುಬ
೩೭. ಕ್ವಾಣಾ
೩೮. ಕ್ಯಾರ‍್ಯಾವು
೩೯. ಕೆಂಜಿಗಿ
೪೦. ಕೆಂಪಿರಿಬೆ
೪೧. ಕೆಂಪುಚೇಳು
೪೨. ಕೆಟ್ಟಪ್ರಾಣಿ
೪೩. ಕೆಟ್ಟಹುಳ
೪೪. ಕುನ್ನಿ
೪೫. ಕುರಿ

೪೬. ಕೂಪ ಮಂಡೂಕ
೪೭. ಕೊಂಡಮುಸುಗ
೪೮. ಕೋಣ
೪೯. ಕೋತಿ
೫೦. ಕೋತಿ ಮುಸುಡಿ
೫೧. ಗಂಡುಬಾವುಗ
೫೨. ಗೂಗಿ
೫೩. ಗೂಗಿಮುಖ
೫೪. ಗೂಗಿಮುಸುಡಿ
೫೫. ಗೂಬೆ
೫೬. ಗೂಬೆಮುಸುಡಿ
೫೭. ಗೊಡ್ಡೆಮ್ಮೆ
೫೮. ಗೋಮುಖ
೫೯. ಗೋಮುಖ ವ್ಯಾಘ್ರ
೬೦. ಗೋರಿಲ್ಲಾ
೬೧. ಗೋಸುಂಬೆ
೬೨. ಘೇಂಡಾಮೃಗ
೬೩. ಚೋಳು
೬೪. ತಿಗಣಿ
೬೫. ದನ
೬೬. ದನದಂತಾವ
೬೭. ದನಕಾಯವಾ

೬೮. ನರಿ

೬೯. ನರಿಬುದ್ದಿ

೭೦. ನಾಯಿ

೭೧. ನಾಯಿಕುನ್ನಿ

೭೨. ನಾಯಿಕುಲ

೭೩. ನಾಯಿಜಾತಿ

೭೪. ನಾಯಿಯಂತವನೆ

೭೫. ನಾಯಿ ನನ್ಮಗ

೭೬. ನಾಯಿಬುದ್ಧಿ

೭೭. ನಾಯಿಬಾಲ

೭೮. ನಾಯಿಬಾಲ ಕುದರೆಜುಟ್ಟು

೭೯. ನಾಯಿ ಮುಸುಡಿ

೮೦. ನಿಂಗ ಹಾವು ಕಚ್ಲಿ

೮೧. ನಿನ್ನ ಕೈಗೆ ಕರಿನಾಗರ ಹಾವು ಕಡ್ಲಿ

೮೨. ನಿನ್ನ ಮುಖ ನಾಯಿ ನೆಕ್ಕ

೮೩. ಪ್ರಾಣಿ

೮೪. ಬಾವುಗ

೮೫. ಭಕಾಪಕ್ಷಿ

೮೬. ಮಂಗ

೮೭. ಮಂಗ್ಯ

೮೮. ಮಂಗ್ಯಯಂತಾವ

೮೯. ಮಂಗ್ಯಾ ನನ್ ಮಗನೇ

೯೦. ಮಂಗ್ಯಾನ ಮುಸುಡಿ
೯೧. ಮಂಗ್ಯಾಗ ಶೆರೆ ಕುಡಿಸಿದಂಗ
೯೨. ಮಂಡದುಂಡಿಗಿ
೯೩. ಮಂಡೂಕ
೯೪. ಮದಗಜ
೯೫. ಮಣಕ
೯೬. ಮುಂಗ್ಲಿ
೯೭. ಮುಂಗ್ಲಿ ಮುಸಿಡಿ
೯೮. ಮೊಸಳೆ ಕಣ್ಣೀರು
೯೯. ಮೃಗ
೧೦೦. ರಣಹದ್ದು
೧೦೧. ವಿಷಕಂತ
೧೦೨. ವಿಷಕನ್ಯೆ
೧೦೩. ವಿಷಕಾರಿ
೧೦೪. ವಿಷಸರ್ಪ
೧೦೫. ಶ್ವಾನ
೧೦೬. ಸೊಳ್ಳೆ
೧೦೭. ಸೊಳ್ಳೆಪ್ಪ
೧೦೮. ಸೊಳ್ಳೆಮ್ಮ
೧೦೯. ಸೊಳ್ಳೆವ್ವ
೧೧೦. ಸೀಳುನಾಯಿ
೧೧೧. ಹಂದಿ

೧೧೨. ಹಂದಿಗುಟ್ಟಿದವ
೧೧೩. ಹಂದಿಕುಲ
೧೧೪. ಹಂದಿಜಾತಿ
೧೧೫. ಹಂದಿ ಮುಸುಡಿ
೧೧೬. ಹಂದಿಯಂತಾವ
೧೧೭. ಹದ್ದು
೧೧೮. ಹದ್ದಿನಕಣ್ಣು
೧೧೯. ಹುಳ
೧೨೦. ಹುಚ್ಚ ಮಂಗ್ಯ
೧೨೧. ಹುಚ್ಚನಾಯಿ
೧೨೨. ಹುಳಕಡ್ಲಿ
೧೨೩. ಹುಳ ಬೀಳ್ಲಿ
೧೨೪. ಹೆಬ್ಬಾವು

ಲಕ್ಷಣಗಳ ಮೇಲೆ ಬೈಗುಳ

೧. ಅಂಜುಬುರುಕ
೨. ಅಳುಕ
೩. ಅಳುಬುರುಕ
೪. ಅಳುಬುರುಕಿ
೫. ಅಷ್ಟವಾಂಕ
೬. ಅಷ್ಟಾವಕ್ರ
೭. ಕುಳ್ಳ
೮. ಕುಳ್ಳಿ
೯. ಕೊಳುಕ
೧೦. ಕೊಳುಕು
೧೧. ಗಿಡ್ಡ
೧೨. ಗಿಡ್ಡಿ
೧೩. ಗಬ್ಬು ನಾರವ
೧೪. ಗೊಬ್ಬು ನಾರವ
೧೫. ಚೊಂಚ
೧೬. ಚೊಂಚಗೈ
೧೭. ಚೊಂಚಕಾಲು
೧೮. ಚೊಂಚಗಾಲು
೧೯. ಚೊಂಚು
೨೦. ಡುಮ್ಮ
೨೧. ಡುಮ್ಮಕ್ಕ
೨೨. ಡುಮ್ಮಣ್ಣ
೨೩. ಡುಮ್ಮವ್ವ

೨೪. ಡುಮ್ಮಾ
೨೫. ಡುಮ್ಮಿ
೨೬. ತಿಕ್ಲಾ
೨೭. ತಿಕ್ಲು
೨೮. ತಿಕ್ಕೋಳು
೨೯. ತಿಕ್ಕೋಳೆ
೩೦. ತಿಕ್ಕೋಳ್ಯೆ
೩೧. ತಿರುಬೋಕಿ
೩೨. ತಿರುಶೆಟ್ಟಿ
೩೩. ದಡಿಯಾ
೩೪. ದರಿದ್ರ
೩೫. ನಿದ್ದಿಬಡುಕ
೩೬. ನಿದ್ದೆಬಡುಕಿ
೩೭. ನಿದ್ದಿಬುರುಕ
೩೮. ಪುಕಲ
೩೯. ಪುಕಲು
೪೦. ಪುಕ್ಕಲ
೪೧. ಪುಕ್ಕಲು
೪೨. ಬಡಕ
೪೩. ಬಡುಕಿ
೪೪. ಬಡ್ಕಿ
೪೫. ಮಬ್ಬು

೪೬. ಮೊಬ್ಬು
೪೭. ಮೊಬ್
೪೮. ಲಂಬು
೪೯. ಲಂಬೋಧರ
೫೦. ವಕ್ರ
೫೧. ಸಣಕಲು
೫೨. ಸೊಟ್ಟ
೫೩. ಹೊಟ್ಟೆಡುಮ್ಮ

ಅಲಂಕಾರಗಳ ಮೇಲಿನ ಬೈಗುಳ

೧. ಚಂದಪ್ಪ
೨. ಚಂದಮಾಮ
೩. ಚಂದ್ರಪ್ಪ
೪. ಚಂದ್ರಾಮ
೫. ಚನ್ನಿಗರಾಯ
೬. ಚಪಲ ಚೆನ್ನಿಗರಾಯ
೭. ಚೆಲುವ
೮. ಚೆಲುವ ಚೆನ್ನಿಗ
೯. ಚೆಲುವಾಂಬ
೧೦. ಚೆಲುವಿ
೧೧. ತಾಟಗಿತ್ತಿ
೧೨. ಬಿನ್ನಾಣಗಿತ್ತಿ
೧೩. ವನಪುನಾರಿ
೧೪. ವೈಯಾರಗಿತ್ತಿ
೧೫. ವೈಯಾರಿ
೧೬. ಸುಂದ್ರ
೧೭. ಸುಂದ್ರಿ
೧೮. ಸುರಸುಂದ್ರ
೧೯. ಸುರಸುಂದ್ರಿ
೨೦. ಸುರಸುಂದರ
೨೧. ಸುರಸುಂದರಿ
೨೨. ಸುರಸುಂದರಾಂಗ
೨೩. ಸುಬ್ಬ

೨೪. ಸುಬ್ಬಕ್ಕ
೨೫. ಸುಬ್ಬಿ
೨೬. ಸುಬ್ಬನಾತಿ
೨೭. ಸುಪನಾತಿ
೨೮. ಸೋಗಲಾಡಿ
೨೯. ಸೋಗಲಾಡಿ ಸುಬ್ಬ
೩೦. ಸೋಗಲಾಡಿ ಸುಬ್ಬಿ
೩೧. ಸೋಗನಾತಿ
೩೨. ಸೋಗನಾತಿ ಸುಬ್ಬ
೩೩. ಸೋಗನಾತಿ ಸುಬ್ಬಿ
೩೪. ಸೋಗಮಾರಿ

ರೋಗಗಳ ಮೇಲೆ ಬೈಗುಳ

೧. ಅಡ್ಡ ಬೀಳ್ಲಿ
೨. ಅಡ್ಡ ಮಲಗ್ಲಿ
೩. ಉಸುರು ನಿಂತೋಗ್ಲಿ
೪. ಕಜ್ಜಿ ಕಂತ್ರಿನಾಯಿ
೫. ಕಜ್ಜಿ ಹತ್ಲಿ
೬. ಕಜ್ಜಿ ನನ್ಮಗ
೭. ಕಜ್ಜಿನಾಯಿ
೮. ಕಣ್ಣುಬೇನೆ ಬರ್ಲಿ
೯. ಕಾಲು ಸೀದು ಹೋಗ್ಲಿ
೧೦. ಕಾಲು ಸೇದು ಹೋಗ್ಲಿ
೧೧. ಕಾಲು ಸೆಟದೋಗ್ಲಿ
೧೨. ಕುಷ್ಠರೋಗ ಬರ್ಲಿ
೧೩. ಕೆಟ್ಟಬ್ಯಾನಿ ಬರ್ಲಿ
೧೪. ಕೈ ಸೀದು ಹೋಗ್ಲಿ
೧೫. ಕೈ ಸೇದು ಹೋಗ್ಲಿ
೧೬. ಕೈ ಸೆಟದೋಗ್ಲಿ
೧೭. ಜ್ವರ ಬಂದ ನೆಗದು ಬೀಳ್ಲಿ
೧೮. ಝುಡ್ಡಿಗೆ ಬೀಳ್ಲಿ
೧೯. ತಲೆ ಸಿಡಿದು ಹೋಗ್ಲಿ
೨೦. ನಾಲಿಗಿ ಬಿದ್ದು ಹೋಗ್ಲಿ
೨೧. ನಾಲ್ಗಿಗಿ ಹುಳಾ ಬಿಳ್ಲಿ
೨೨. ನಿಗರಿಕೊಂಡು ಹೋಗ್ಲಿ
೨೩. ನಿನಗ ಕುಷ್ಠರೋಗ ಬರ್ಲಿ

೨೪. ನಿನಗೆ ಬರಬಾರದು ಬರ್‍ಲಿ
೨೫. ನೆಗೆದು ಬಿಳ್ಲಿ
೨೬. ನೆಲಹಿಡ್ಲಿ
೨೭. ನೆಲಕಚ್ಲಿ
೨೮. ಪಿಚಗಣ್ಣು
೨೯. ಪಿಚಗಳ್ಳಿ
೩೦. ಬರಬಾರದ್ದು ಬರ್‍ಲಿ
೩೧. ಬರಬಾರದ ರೋಗ ಬರ್‍ಲಿ
೩೨. ಬಾಯಿ ಬಿದ್ಹೋಗ
೩೩. ಬಾಯಿಬಿಳ್ಲಿ
೩೪. ಬೇಮಾರಿ ಬರ್‍ಲಿ
೩೫. ಮುಕಳೆ ಸೋರ್‍ಲಿ
೩೬. ಮೊಂಡಗೈ ಆಗ್ಲಿ
೩೭. ಲಕ್ವಾ ಹೊಡಿಯಾ
೩೮. ಶೆಟಗೊಂಡ ಹೋಗ್ಲಿ
೩೯. ಶೆಟಿಬ್ಯಾನಿ ಬರ್‍ಲಿ
೪೦. ಶೆಟದೋಗ್ಲಿ
೪೧. ಹೇಲಾಟ ಹತ್ಲಿ
೪೨. ಹೊಟ್ಟೆ ಉರ್‍ಲಿ
೪೩. ಹೊಟ್ಟೆ ಕಡ್ಲಿ
೪೪. ಹೊಟ್ಟೆ ಚುಚ್ಲಿ
೪೫. ಹೊಟ್ಟೆಬ್ಯಾನೆ ಬರ್ಲಿ

ದುಷ್ಟತನದ ಬೈಗುಳ

೧. ಅಡ್ನಾಡಿ
೨. ಅಡಾವುಡಿ
೩. ಅಹಂಕಾರಿ
೪. ಕಚ್ಚೆಹರುಕ
೫. ಕಟುಕ
೬. ಕಾಮುಕ
೭. ಕಿರಾತಕ
೮. ಕುಡುಕ
೯. ಕೆಡುಕ
೧೦. ಕೊಲೆಗಡುಕ
೧೧. ಕೊಲೆಗಾತಿ
೧೨. ಕೊಲೆಗಾರ
೧೩. ಕೊಲೆಪಾತಕಿ
೧೪. ತಲೆತಿರುಕ
೧೫. ತಲೆಹಿಡುಕ
೧೬. ದುರಹಂಕಾರಿ
೧೭. ದುರುಳ
೧೮. ದುಷ್ಟ
೧೯. ದೆವ್ವ
೨೦. ದೈತ್ಯ
೨೧. ನಿಕೃಷ್ಟ
೨೨. ನೀಚ
೨೩. ನೀಚ ನಕೃಷ್ಠ

೨೪. ನೀಚತನ
೨೫. ಧೂರ್ತ
೨೬. ಪಾಪಗೆಂಡಿ
೨೭. ಪಾಪಗೇಡಿ
೨೮. ಪಾಪಿ
೨೯. ಪಾಪ್ ಸೂಳೆಮಗ
೩೦. ಪಾಪಿ
೩೧. ಭದ್ಮಾಶ್
೩೨. ಭದ್ಮಾಸಗಿರಿ
೩೩. ಭಯಂಕರ
೩೪. ಮೋಸಗಾರ
೩೫. ಮೋಸಗಾತಿ
೩೬. ರಾಕ್ಷಸ
೩೭. ರಾಕ್ಷಸ ಪ್ರವೃತ್ತಿ
೩೮. ರಾಕ್ಷಸಿ

ಗರ್ವದ ಬೈಗುಳ

೧. ಅಹಂಕಾರಿ
೨. ಕುಂಡೆ ತುಂಬಿದವಾ
೩. ಗರ್ವಿ
೪. ಗರ್ವಿಷ್ಠ
೫. ತಲೆಗೇರಿದಾವ
೬. ತುಂಬಿದಾವ
೭. ದುರಹಂಕಾರಿ
೮. ಧನವಂತ
೯. ಧಿಮಾಕು
೧೦. ಧಿಮಾಕುಗೇಡಿ
೧೧. ಧಿಮಾಕಿನಾವ
೧೨. ಧಿಮಾಕಿನವಳು
೧೩. ನಿಗಿರಿದಾಕಿ
೧೪. ನಿಗಿರಿದವಳು
೧೫. ನಿಗಿರಿದಾವ
೧೬. ನೀಚ
೧೭. ನೀಚತನ
೧೮. ನೆತ್ತಿಗೇರಿದಾವ
೧೯. ನೆತ್ತಿಗೇರಿದವಳು
೨೦. ಮದ ಏರಿದಾವ
೨೧. ಮದಗಜ
೨೨. ಮಧಾಂದ
೨೩. ಮುಕಳಿ ತುಂಬಿದಾವ

೨೪. ಮುಕಳ್ಯರೆ ಸೊಕ್ಕು
೨೫. ಸೊಕ್ಕಿಂದು
೨೬. ಸೊಕ್ಕಿನಾವ
೨೭. ಸೊಕ್ಕಿನವಳು
೨೮. ಸೊಕ್ಕಿನಾಕಿ
೨೯. ಹೊಟ್ಟಿ ತುಂಬಿದಾವ

ಶಾಪದ ಬೈಗುಳ

೧. ಉಡದಾರ ಹರ್ಲಿ
೨. ಉರ್ಲು ಹಾಕ್ಲಿ
೩. ಉಳ್ಳಿ ಹೋಗು
೪. ಊರಣಗ್ಯಾಗ ಉಪ್ಪಾಕ್ಲಿ
೫. ಎಡಗೈಲಿ ಕದಮುಚ್ಚಾ
೬. ಎಲ್ಲರೂ ಹಾಳಾಗಿ ಹೋಗ್ಲಿ
೭. ಕಾರಿಮುಳ್ಳ ಹಚ್ಲಿ
೮. ಕೆಟ್ಟಬ್ಯಾನಿ ಬರ್ಲಿ
೯. ಜೀವನಕ್ಕೆ ಬೆಂಕಿಹಾಕ
೧೦. ದೀಪ ಆರ್ಲಿ
೧೧. ನಡು ಮಧ್ಯಾಹ್ನ ಹೋಗ್ಲಿ
೧೨. ನಿನಗ ಬರಬಾರದು ಬರ್ಲಿ
೧೩. ನಿನ್ನ ಬಾಯಿ ಸೇದೋಗ್ಲಿ
೧೪. ನಿನ್ನ ಮುಕ ನಾಯಿ ನೆಕ್ಕ
೧೫. ನಿರ್ವಂಶವಾಗ್ಲಿ
೧೬. ನಿಮ್ಮ ಮನೆಗೆ ಬಾರಿ ಮುಳ್ಳು ಬಡಿಲಿ
೧೭. ನಿಮ್ಮನಿ ಹಾಳಾಗಿ ಹೋಗ್ಲಿ
೧೮. ನೆಗದುಬಿದ್ದು ನೆಲ್ಲಿಕಾಯಿ ಆಗು
೧೯. ನೆಗದಬಿದ್ದು ಹೋಗು
೨೦. ನೆಗದು ಬೀಳ್ಲಿ
೨೧. ನೆಮ್ಮದಿ ಹಾಳಾಗಿ ಹೋಗ್ಲಿ
೨೨. ಬಕ್ಕಬಾರ್ಲ ಬಡ್ಲಿ
೨೩. ಬಾರಲ ಬಡ್ಲಿ
೨೪. ಬಾಸಿಂಗ್ ಬರಿದಾಗ್ಲಿ

೨೫. ಬಾಯಾಗ ಮಣ್ಣಾಕ್ಲಿ
೨೬. ಬಾಯಿಸೋದೋಗ್ಲಿ
೨೭. ಬಾಯಿಸೆಟುದುಹೋಗ್ಲಿ
೨೮. ಮನಿ ಮುಚ್ಲಿ
೨೯. ಮನಿಗಿ ಬೆಂಕಿಹಾಕ್ಲಿ
೩೦. ಮನಿ ಮುಚ್ಲಿ
೩೧. ಮಾರಿ ಮಣ್ಣಾಗ್ಲಿ
೩೨. ಮುಖಕ್ಕ ಮಣ್ಣಾಕ್ಲಿ
೩೩. ಮುಖಕ್ಕೆ ಮಂಗಳಾರತಿ ಎತ್ಲಿ
೩೪. ಲಕ್ವ ಹೊಡಿಯಾ
೩೫. ವಂಶ ನಾಶವಾಗ್ಲಿ
೩೬. ವಂಶ ನಿರ್ವಂಶವಾಗ್ಲಿ
೩೭. ವೈಕಂತಹೋಗು
೩೮. ವೈಕೊಂತ ಹೋಗು
೩೯. ಶಟಬ್ಯಾನಿ ಬರ್ಲಿ
೪೦. ಸತ್ತಸುಡುಗಾಡ ಸೇರ್ಲಿ
೪೧. ಸತ್ಯನಾಶವಾಗ್ಲಿ
೪೨. ಸರ್ವನಾಶವಾಗಿ ಹೋಗು
೪೩. ಸರ್ವನಾಶವಾಗ್ಲಿ
೪೪. ಸುಡುಗಾಡ ಸೇರು
೪೫. ಸೆಟದುಹೋಗ್ಲಿ
೪೬. ಸೆಟಗೆಂಡ ಹೋಗ್ಲಿ
೪೭. ಸುಡುಗಾಡು ಸೇರು
೪೮. ಹಟಬಿದ್ದ ಹೋಗಿ ಬಿಡು

೪೯. ಹರಿಗಿ ಹತ್ತಿಬಿತ್ತಿ
೫೦. ಹಾಳಮಾಡಿ ಹತ್ತಿ ಬಿತ್ತಿ
೫೧. ಹಾಳಾಗಿ ಹೋಗು
೫೨. ಹಾಳಾಗಿ ಹೋಗ್ಲಿ
೫೩. ಹೊಟ್ಟೆ ಉರ್ಲಿ
೫೪. ಹೊತ್ಗಂಡು ಹೋಗ್ಲಿ

ಅಶ್ಲೀಲಪದ ಬೈಗುಳ

೧. ಅಂಗಿ ಬಿಚ್ಚಿಹೊಡಿತೀನಿ
೨. ಅಡಕಸಬಿ
೩. ಆಪ್ ಸೂಳೇಮಗ
೪. ಕೆಟ್ಟರಾಡ್ಯ
೫. ಗಾಂಡು
೬. ಗಾಡ್ಯಾ
೭. ಚಕ್ಕಾ ನನ್ಮಗ
೮. ಜಿಟ್ಟೆ
೯. ಜಿಟ್ಯಾ
೧೦. ನೀ ಗಂಡಸೋ
೧೧. ಪೂರ್ತಿ ಸೂಳೇಮಗ
೧೨. ಬಾರಲೇ ಮೀಟ್ರು ಇದ್ರೆ
೧೩. ಬೋಸುಡಿಕೆ
೧೪. ಮಬ್ಬ ಹಡಸಿಕೆ
೧೫. ಮಿಂಡ್ರಿ
೧೬. ಮಿಂಡ್ರಿಗುಟ್ಟಿದವಳು
೧೭. ಮಿಂಡ್ರಿಗುಟ್ಟಿದಾವ
೧೮. ರಾಡ್ಯಾ
೧೯. ಲುಚ್ಯಾ
೨೦. ಲೌಡಿ
೨೧. ಲ್ವಾಳಾ
೨೨. ಸೂಳೇಮಗ
೨೩. ಹಡಿಸಿಕೆ
೨೪. ಹಡಸು
೨೫. ಹಡಿಸಿಮಗ
೨೬. ಹಡಸ್ಲಿ
೨೭. ಹಲ್ಕಟ್ ಸೂಳೇಮಗ

೨೮. ಹಾದರಗಿತ್ತಿಮಗ
೨೯. ಹುಚ್ಚುಗೆಂಡಿ ಸೂಳೇಮಗ
೩೦. ಹುಚ್ಚಹಡಿಸಿಕೆ
೩೧. ಹೇ ಹುಚ್ಚು ಸೂಳೆಮಗನೆ
೩೨. ಹೇ ಬೋಸುಡಿಕೆ

ಬಳಕೆಯ ವಸ್ತುಗಳ ಬಳಸಿ ಬೈಗುಳ

೧. ಎಕ್ಕಡ
೨. ಕಚ್ಚರುಕ
೩. ಕಡ್ಡಿ
೪. ಕತ್ತಿ
೫. ಕಸ
೬. ಕಸಬರಿಗೆ
೭. ಕಾಲ್ಮರಿ
೮. ಕುಡಗೋಲು
೯. ಕೆರ
೧೦. ಕೌದ್ಯಾಗ ಸುತ್ಲಿ
೧೧. ಕೊಡ್ಲಿ
೧೨. ಕೊಳಕು ಬಟ್ಯಾವ
೧೩. ಗಡಿಗಿ
೧೪. ಗುಂಡಕಲ್ಲು
೧೫. ಚಪ್ಲಿ
೧೬. ಚಮ್ಚ
೧೭. ಚಾಪಿ ಸುತ್ತಲಿ
೧೮. ಛತ್ರಿ
೧೯. ಛತ್ರಿ–ಬಿತ್ರಿ
೨೦. ತಂಬ್ಗಿ
೨೧. ತುಪ್ಪಸುರಿ
೨೨. ತುಪ್ಪ ಸುರ್ಲಿ
೨೩. ತೂತುಗಡಿಗಿ

೨೪. ಬಕೇಟು
೨೫. ಬಕೇಟು ಹಿಡ್ಯಾವಾ
೨೬. ಬೂಟು ನೆಕ್ಕಾವಾ
೨೭. ರುಬ್ಬುಕಲ್ಲು
೨೮. ರುಬ್ಬುಗುಂಡು
೨೯. ಹಂಡೆ
೩೦. ಹಂಡೆಕುಂಡೆ
೩೧. ಹಂಡೆದಂತವ
೩೨. ಹುಳಿ ಹಿಂಡಾವಾ
೩೩. ಹುಲ್ಲು
೩೪. ಹುಲ್ಲುಕಡ್ಡಿ

ಆಹಾರದ ಮೇಲೆ ಬೈಗುಳ

೧. ಅರ್ಧಂಬರ್ಧ ಬೆಂದಾವ
೨. ಅನ್ನಕ ಗತಿ ಇಲ್ಲದವಳು
೩. ಅನ್ನಕ ಗತಿ ಇಲ್ಲದಾವ
೪. ಅನ್ನ ನೀರಿಗೂ ಗತಿ ಇಲ್ಲದವ
೫. ಅರೆಬೆಂದವಾ
೬. ಉಪ್ಪಿಗೂ ಗತಿ ಇಲ್ಲದವ
೭. ಉಪ್ಪಿಗೂ ಗತಿ ಇಲ್ಲದವಳು
೮. ಎಳೆನಿಂಬೆ
೯. ಒಣರೊಟ್ಟಿ
೧೦. ಒಣರೊಟ್ಟಿಗೂ ಗತಿ ಇಲ್ಲದವ
೧೧. ಒಣರೊಟ್ಟಿಗೂ ಗತಿ ಇಲ್ಲದವಳು
೧೨. ಕಣ್ಣಾಗ ಕಾರಪುಡಿ ತುಂಬತಿನಿ
೧೩. ಕಾರಪುಡಿ ಹಾಕಿದಂಗಾತು
೧೪. ಕುಂಬಳಕಾಯಿ ಕಳ್ಳ
೧೫. ಕುಂಬಳಕಾಯಿ ಮಾವ
೧೬. ಗಂಜಿಗೂ ಗತಿಇಲ್ಲದವಳು
೧೭. ಗಂಜಿಗೂ ಗತಿಇಲ್ಲದಾವ
೧೮. ಚಟ್ನಿ ರುಬ್ಬಿದಂಗ ರುಬ್ತೀನಿ
೧೯. ಚಿಂದಿ ಚಿತ್ರಾನ್ನ
೨೦. ಚಿತ್ರಾನ್ನಾ
೨೧. ತಂಗಳನ್ನ
೨೨. ತಪ್ಪಲು
೨೩. ತಪ್ಲ

೨೪. ತೊಪ್ಲ
೨೫. ತೊಪ್ಲಪಲ್ಲೆ
೨೬. ತೆಂಗಿನಕಾಯಿ ಹೊಡದಂಗ ಹೊಡಿತಿನಿ
೨೭. ತುಂಡುರೊಟ್ಟಿಗೂ ಗತಿ ಇಲ್ಲದವಳು
೨೮. ತುಂಡುರೊಟ್ಟಿಗೂ ಗತಿ ಇಲ್ಲದಾವ
೨೯. ತುಂಡುರೊಟ್ಟಿ ಸಿಗದಂಗ ಮಾಡ್ತಿನಿ
೩೦. ನೀರಬ್ಯಾಳ್ಯ
೩೧. ನೀರಮಜ್ಜಿಗಿ
೩೨. ಪುಂಡೆಪಲ್ಲೆ
೩೩. ನೀರಿಗೂ ಗತಿ ಇಲ್ಲದವಳು
೩೪. ನೀರಿಗೂ
೩೫. ಪುಂಡೆಪಲ್ಲೆ ಮಾವ
೩೬. ಬದ್ನೆಕಾಯಿ ಮಾತು
೩೭. ಬೂದುಗುಂಬಳಕಾಯಿ
೩೮. ಬ್ಯಾಳೆವರದಂಗ ವರಿತೀನಿ
೩೯. ಮೆಣಸಿನಕಾಯಿ ಇಟ್ಟಂಗಾತು
೪೦. ಮುರುಕುರೊಟ್ಟಿಗೂ ಗತಿ ಇಲ್ಲದವಳು
೪೧. ಮುರುಕುರೊಟ್ಟಿಗೂ ಗತಿ ಇಲ್ಲದಾವ
೪೨. ಮೊಸರುಗಡಿಗೆ
೪೩. ರೊಟ್ಟಿ ಸುಟ್ಟಂಗ ಸುಡತೀನಿ
೪೪. ಸಪ್ಪನಬ್ಯಾಳಿ
೪೫. ಸಪ್ಪನ ಮಾವ
೪೬. ಸುಟ್ಟ ಬದ್ನೆಕಾಯಿ

೪೭. ಹಳಸಿದನ್ನ
೪೮. ಹಳಸಿದಬ್ಯಾಳಿ
೪೯. ಹಾಗಲಕಾಯಿ
೫೦. ಹುಳಿಹಿಂಡಾಕಿ
೫೧. ಹುಳಿಹಿಂಡಾವ

ಬಣ್ಣಗಳ ಹೆಸರಿನ ಮೇಲೆ ಬೈಗುಳ

೧. ಅಮಾಸಿ
೨. ಅಮಾಸಿ ಕತ್ತಲ
೩. ಕತ್ತಲ
೪. ಕತ್ತಲಮಾಸಿ
೫. ಕರ್‍ರಗ
೬. ಕರಿಇದ್ದಿ
೭. ಕರಿಕಾಗಿ
೮. ಕರಿನಾಯಿ
೯. ಕರಿಬೆಕ್ಕು
೧೦. ಕರಿಮಂತ್ರಿಗೇಡಿ
೧೧. ಕರಿಮಟಗ
೧೨. ಕರಿಮುಸುಡಿ
೧೩. ಕರಿಮುಸುಗ
೧೪. ಕರಿಮುಖ
೧೫. ಕರಿಮಾ
೧೬. ಕರಿಯಾ
೧೭. ಕರಿಹಂದಿ
೧೮. ಕೆಂಪುಚೇಳು
೧೯. ಕೆಂಪ್ಯ
೨೦. ಕೆಂಪಿ
೨೧. ಕಪ್ಯಾ
೨೨. ಬಿಳಿಗ್ವಾಡೆ
೨೩. ಬಿಳುಚುಮಾರೆವಾ

೨೪. ಬಿಳುಚುಮಾರ‍್ಯಾಕಿ
೨೫. ಮಬ್ಬು
೨೬. ಮೊಬ್ಬು
೨೭. ಮೊಬ್
೨೮. ಮೊಬ್ಬಡ್ಸಿ
೨೯. ಮೊಬ್ಬಡಿಸಿಕೆ
೩೦. ಮೊಬ್ಬಡಿಸಿಮಗ

ನಟನೆ ಕುರಿತ ಬೈಗುಳ

೧. ಅಪ್ಸರೆ
೨. ಅಪ್ಸರೆಯರು
೩. ಊರ್ವಶಿ
೪. ಕಲಾವಿದ
೫. ಕಲಾಕಾರ
೬. ಕಲಾರಸಿಕ
೭. ಕಲಾವತಿ
೮. ಜಾದುಗಾರ
೯. ಜಾದುಗಾತಿ
೧೦. ಡೊಂಗಿ
೧೧. ಡೋಂಗಿ
೧೨. ಡೈಲಾಗ ಹೊಡ್ಯಾವಾ
೧೩. ತಿಲೋತ್ತಮೆ
೧೪. ನಟಭಯಂಕರ
೧೫. ನಟಭೈರವ
೧೬. ನಾಟಕಕಾರ
೧೭. ಭಕಧ್ಯಾನ
೧೮. ಮನೋರಮೆ
೧೯. ಮಾಂತ್ರಿಕ
೨೦. ಮುಖಕ್ಕೆ ಬಣ್ಣ ಹಚ್ಚಾವ
೨೧. ಮೇನಕಾ
೨೨. ಮೇನಕೆ
೨೩. ಮೋಡಿಕಾರ

೨೪. ರಂಭೆ
೨೫. ರಂಭಾ
೨೬. ಸಕಲಕಲಾವಲ್ಲಭ
೨೭. ಸಕಲಕಲಾ ಪ್ರವೀಣ
೨೮. ಸೋಗನಾತಿ
೨೯. ಸೋಗನಾತಿ ಸುಬ್ಬಿ
೩೦. ಸೋಗಮಾರಿ
೩೧. ಸೋಗಲಾಡಿ
೩೨. ಸೋಗಲಾಡ್ಯಾ
೩೩. ಸೋಗಲಾಡಿ ಸುಬ್ಬ
೩೪. ಸೋಗಲಾಡಿ ಸುಬ್ಬಿ

ಹೊಗಳಿಕೆಯೋ? ಬೈಗುಳವೋ?

೧. ಅತಿಸುಂದರ
೨. ಅತಿಸುಂದರಿ
೩. ಅಪ್ಸರೆ
೪. ಅಪ್ಸರೆಯರು
೫. ಅರಣ್ಯಪಂಡಿತ
೬. ಊರ್ವಶಿ
೭. ಗರತಿ
೮. ಗರ್ತಿ
೯. ಚಪಲಚನ್ನಿಗರಾಯ
೧೦. ಚಿರಂಜೀವಿ
೧೧. ಚನ್ನಿಗ
೧೨. ಚನ್ನಿಗರಾಯ
೧೩. ಚೆಲುವ
೧೪. ಚೆಲುವ ಚಂದ್ರಾಮ
೧೫. ಚೆಲುವ ಚಂದಿರ
೧೬. ಚೆಲುವ ಚನ್ನಿಗ
೧೭. ಚೆಲುವ ಚನ್ನಿಗರಾಯ
೧೮. ಚೆಲುವಿ
೧೯. ತಿಲೋತ್ತಮೆ
೨೦. ತ್ರಿಕಲಜ್ಞಾನಿ
೨೧. ದಾನವ
೨೨. ದಾನ-ಶೂರ
೨೩. ದಾನಶೂರ ಕರ್ಣ

೨೪. ದೀಡಪಂಡಿತ
೨೫. ದೀಡಶ್ಯಾಣ್ಯಾ
೨೬. ದೊಡ್ಡಪಂಡಿತ
೨೭. ದೊಡ್ಡಶ್ಯಾಣ್ಯಾ
೨೮. ದೊಡ್ಡಸಾಚಾ
೨೯. ಧನವಂತ
೩೦. ಧರ್ಮರಾಯ
೩೧. ನಾರದ
೩೨. ಪಂಡಿತ
೩೩. ಪಂಡಿತ-ಪಾಮರ
೩೪. ಮನೋರಮೆ
೩೫. ಮಹಾಸುಜ್ಞಾನಿ
೩೬. ಮಹಾಜ್ಞಾನಿ
೩೭. ಮೇನಕಾ
೩೮. ಮೇನಕೆ
೩೯. ರಂಬೆ
೪೦. ಶ್ಯಾಣ್ಯಾ
೪೧. ಶ್ರೀದೇವಿ
೪೨ ಸರ್ವಜ್ಞ
೪೩. ಸಾಚಾ
೪೪. ಸುಂದರ
೪೫. ಸುಂದರಿ

೪೬. ಸುಂದ್ರ
೪೭. ಸುಂದ್ರಿ
೪೮. ಸುಂದ್ರಾಂಗ
೪೯. ಸುರಸುಂದ್ರಾಂಗ
೫೦. ಸುರಸುಂದ್ರಾಂಗಿ
೫೧. ಸುಜ್ಞಾನಿ
೫೨. ಜ್ಞಾನಿ

ಅನ್ಯದೇಶಿಪದ ಬೈಗುಳ

೧. ಆಫ್ ಹಡಿಸಿಕೆ
೨. ಆಫ್ ಸೂಳೆಮಗ
೩. ಕಡೆಪಾನ್
೪. ಖತರನಾಕ್
೫. ಗಾಂಡು
೬. ಚಕ್ಕಾ
೭. ಚಮ್ಚ
೮. ಚಪ್ಪರ್
೯. ಚಿನಾಲಿ
೧೦. ಚಿನಾಲ್ಕೆ
೧೧. ಚೂತ್ಯಾ
೧೨. ನಾನ್‌ಸೆನ್ಸ್
೧೩. ನಾಲಾಯಕ್
೧೪. ಪಾಗಲ್
೧೫. ಬಕೇಟು
೧೬. ಬದ್ಮಾಶ್
೧೭. ಬೆಗ್ಗರ್
೧೮. ಬೆಗ್ಗರ್ ನನ್ಮಗ
೧೯. ಭದ್ಮಾಶ್
೨೦. ಬೇಕುಫಾ
೨೧. ಬೇಕೂಬಾ
೨೨. ಮೆಂಟಲ್
೨೩. ಲಫಂಗಾ

೨೪. ಲೂಸು
೨೫. ಲೌಡಿ
೨೬. ಲೌಡಿಕೆ
೨೭. ಲೌಡಿಕೆ ಬಾಲ್
೨೮. ಸುವ್ವರ್
೨೯. ಹಾಪ್‌ಹಡಿಸಿ ಮಗ
೩೦. ಹಿಜಡಾ



ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್‌ರವರ ಕೃತಿಗಳು

ಸ್ವತಂತ್ರ ಕೃತಿಗಳು:–

೧ **ಕೊಪ್ಪಳ ಜಿಲ್ಲೆಯ ಶಾಸನಗಳು ಮತ್ತು ಸಾಂಸ್ಕೃತಿಕ ಇತಿಹಾಸ**
(ಪಿಎಚ್.ಡಿ ಸಂಶೋಧನಾ ಮಹಾಪ್ರಬಂಧ)
- ಪ್ರಥಮ ಮುದ್ರಣ – ೨೦೧೦
- ಪರಿಷ್ಕೃತ ದ್ವಿತೀಯ ಮುದ್ರಣ – ೨೦೨೦

೨. **ಸಂಸಾರ ಸಗ್ಗ**
(ನಮ್ಮ ಕುಟುಂಬದಲ್ಲಿ ನಡೆದ ಹಾಸ್ಯ ಪ್ರಸಂಗಗಳು)
- ಪ್ರಥಮ ಮುದ್ರಣ– ೨೦೧೪
- ಪರಿಷ್ಕೃತ ದ್ವಿತೀಯ ಮುದ್ರಣ – ೨೦೧೭
- ಪರಿಷ್ಕೃತ ತೃತಿಯ ಮುದ್ರಣ – ೨೦೨೦

೩. **ಮಾನವಿ ತಾಲೂಕಿನ ಇತಿಹಾಸ ಮತ್ತು ಸಂಸ್ಕೃತಿ**
(ಸಂಶೋಧನಾ ಕೃತಿ – ೨೦೧೭
ಡಾ. ಚನ್ನಬಸವಯ್ಯ ಹಿರೇಮಠರೊಂದಿಗೆ)

೪. **ಕೊಪ್ಪಳದ ಕಿಷ್ಕಿಂದೆಯ ಅಂಜನಾದ್ರಿ ಪರ್ವತ ಪ್ರದೇಶವೇ ಹನುಮನ ಜನ್ಮಸ್ಥಳ; ಒಂದು ಸಮರ್ಥನೆ**
(ಕಿರುಹೊತ್ತಿಗೆ–೨೦೨೧)

೫. **ಕೊಪ್ಪಳ ಸ್ಥಳನಾಮ: ಒಂದು ವಿಶ್ಲೇಷಣೆ** (೨೦೨೨)

೬. **ಕೊಪ್ಪಳ ತಾಲ್ಲೂಕು ಗ್ಯಾಸೆಟಿಯರ್** (೨೦೨೨)

೭. **ಕೊಪ್ಪಳ ಚರಿತ್ರೆ ಮತ್ತು ಸಂಸ್ಕೃತಿಯ ಹುಡುಕಾಟ** (೨೦೨೩)

ಸಂಪಾದಿತ ಕೃತಿಗಳು:–

೧. **ತುಂಗಾ ಲಹರಿ**
(ಮಾನವಿ ತಾಲೂಕ ಪ್ರಾತಿನಿಧಿಕ ಕವನ ಸಂಕಲನ,
ಪ್ರಧಾನ ಸಂಪಾದಕರು – ಶ್ರೀ ರಾಮಚಂದ್ರಪ್ಪ –೨೦೦೮)

೨ **ಮಾನ್ವಿಯ ಮಹನೀಯರು**
(ಮಾನ್ವಿ ತಾಲೂಕಿನ ಸಾಹಿತ್ಯ ಕ್ಷೇತ್ರದ ಮಹನೀಯರ
ಜೀವನ ಚರಿತ್ರೆಗಳ ಸಂಗ್ರಹ – ೨೦೧೪)

3. ಸಮಕಾಲೀನ ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ
(ಕನ್ನಡ, ಹಿಂದಿ ಹಾಗೂ ಇಂಗ್ಲೀಷ ಆಧುನಿಕ ಸಾಹಿತ್ಯದಲ್ಲಿ
ಸ್ತ್ರೀ ಸಂವೇದನೆ ಎಂಬ ವಿಷಯದ ಮೇಲೆ ನಡೆದ ವಿಚಾರ
ಸಂಕಿರಣದ ಪ್ರಬಂಧಗಳ ಸಂಗ್ರಹ,
ಪ್ರಧಾನ ಸಂಪಾದಕರು – ಡಾ. ದಯಾನಂದ ಸಾಳುಂಕೆ – ೨೦೧೭)

೪. ಕೊಪ್ಪಳ ಜಿಲ್ಲೆಯ ಜನಪದ ಬೈಗುಳ
(ಕೊಪ್ಪಳ ಜಿಲ್ಲೆಯ ಜನಪದ ಬೈಗುಳಗಳ ಸಂಗ್ರಹ–೨೦೨೪)

ಸಹ ಸಂಪಾದಕರಾಗಿ:–

೧ ಮನಸಿರಿ

(ಮಾನ್ವಿ ತಾಲೂಕ ನಾಲ್ಕು ಕನ್ನಡ ಸಾಹಿತ್ಯ ಸಮ್ಮೇಳನಗಳ
ವಿಶೇಷ ಸ್ಮರಣ ಸಂಚಿಕೆ
ಪ್ರಧಾನ ಸಂಪಾದಕರು– ಶ್ರೀ ರಾಮಚಂದ್ರಪ್ಪ –೨೦೦೪)

ಸಂಪಾದಕ ಮಂಡಳಿ ಸದಸ್ಯರಾಗಿ :–

೧. ಕೊಪಣಸಿರಿ (ಕೊಪ್ಪಳ ಜಿಲ್ಲಾ ಅಧ್ಯಯನ)
(ಅಖಿಲ ಭಾರತ ೭೮ನೇ ಕನ್ನಡ ಸಾಹಿತ್ಯ ಸಮ್ಮೇಳನ
ಗಂಗಾವತಿ, ಜಿಲ್ಲೆ ಕೊಪ್ಪಳ ಸ್ಮರಣ ಸಂಚಿಕೆ
ಸಂಪಾದಕರು – ಶ್ರೀ ಹೆಚ್.ಎಸ್. ಪಾಟೀಲ್ – ೨೦೧೩

೨. ಸ್ನೇಹ ಜೀವಿ
(ಬಿ.ಎಸ್.ಪಾಟೀಲರ ಅಭಿನಂದನಾ ಗ್ರಂಥ,
ಪ್ರಧಾನ ಸಂಪಾದಕರು – ಶ್ರೀ ಜಿ.ಎಸ್.ಗೋನಾಳ–೨೦೧೩)

೩. ಮಾದಿನೂರು ಮಾಣಿಕ್ಯ
(ಜಿ. ಎಸ್. ಗೋನಾಳರ ಅಭಿನಂದನಾ ಗ್ರಂಥ,
ಪ್ರಧಾನ ಸಂಪಾದಕರು – ಶ್ರೀ ಮಹೇಶಬಾಬು ಸುರ್ವೆ–೨೦೧೫)

೪. **ಕೊಪಣಾದ್ರಿ**
(ಕೊಪ್ಪಳ ಜಿಲ್ಲಾ ರಜತ ಮಹೋತ್ಸವ ಸ್ಮರಣ ಸಂಚಿಕೆ)
ಪ್ರಕಟಣೆ : ಜಿಲ್ಲಾ ಆಡಳಿತ, ಕೊಪ್ಪಳ – ೨೦೨೩

ಮುದ್ರಣದಲ್ಲಿರುವ ಕೃತಿಗಳು :

೧. **ಕೊಪ್ಪಳ ಜಿಲ್ಲೆಯ ಜೈನ ನೆಲೆಗಳು** (ಸಂಶೋಧನಾ ಕೃತಿ)
೨. **ಕೊಪ್ಪಳ ಜಿಲ್ಲೆಯ ಸುಗಮ ಸಂಗೀತ ಪರಂಪರೆ**
೩. **ನಮ್ಮವರು**
೪. **ನಮ್ಮವರ ಕೃತಿಗಳು**
೫. **ಕೊಪ್ಪಳ ಚರಿತ್ರೆ ಮತ್ತು ಸಂಸ್ಕೃತಿಯ ಹುಡುಕಾಟ–೨**